ಜನಪದ ಸೇವಕ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೮ ಜನವರಿ-೨೦೦೮ ಸಂಚಿಕೆ-೬



ವೇಗ + ಸ್ಪರ್ಧೆ + ಆಸೆ = ವಿನಾಶ

ಜನಪದ ವಿಚಾರದಲ್ಲಿ

೧) ವೇಗ + ಸ್ಪರ್ಧೆ + ಆಸೆ = ವಿನಾಶ

– ಸುರೇಂದ್ರ ಕೌಲಗಿ ಪುಟ – ೩

ವೇಗ, ಸ್ಪರ್ಧೆ, ಆಸೆ ಈ ಮೂರೂ ಸುಂಟರಗಾಳಿಯಂತೆ ಜಗತ್ತಿನಲ್ಲಿ ಸುತ್ತುತ್ತಿವೆ. ಈ ಸುಂಟರಗಾಳಿಯಲ್ಲಿ ತರಗೆಲೆಯಂತೆ ಮಾನವ ಹಾರಿ ಹೋಗುವ ಮುನ್ನ ತನ್ನ ಜೀವನದಲ್ಲಿ ಮೌಲ್ಯಗಳನ್ನು ಸ್ಥಾಪಿಸಿ ಭದ್ರವಾಗಿ ಈ ಭೂಮಿಯ ಮೇಲೆ ಜೀವನ ನಡೆಸುವ ಬಗೆಯನ್ನು ಆಲೋಚಿಸ ಬೇಕಾಗಿದೆ. ಈ ವಿಷಯ ಕುರಿತಾಗಿ ಕೆಲವು ಯೋಚನೆಗಳು ಈ ಲೇಖನದಲ್ಲಿ ಪ್ರಕಟಗೊಂಡಿವೆ.

೨) ಶಿಕ್ಷಣ, ಸ್ವರಾಜ್ಯ ಮತ್ತು ದೇಶಭಕ್ತಿಯ ಬಗ್ಗೆ ಗಾಂಧೀ ಮತ್ತು ಟಾಗೋರ್

– ಗುರುದಯಾಳ್ ಮಲ್ಲಿಕ್ ಪುಟ – ೬

ರವೀಂದ್ರನಾಥ ಟಾಗೋರ್ ಮತ್ತು ಮಹಾತ್ಮಾ ಗಾಂಧೀ ಅಪ್ರತಿಮ ಶಿಕ್ಷಣ ಪ್ರೇಮಿಗಳೂ, ಸ್ವರಾಜ್ಯಕ್ಕಾಗಿ ಹೋರಾಡಿದವರೂ ಮತ್ತು ತಮ್ಮ ದೇಶಭಕ್ತಿ ಹೇಗೆ ಅಪಾಯರಹಿತವೆಂಬುದನ್ನು ತೋರಿಸಿಕೊಟ್ಟಂಥ ನಾಯಕರು. ಈ ಲೇಖನದಲ್ಲಿ ಶಿಕ್ಷಣ, ಸ್ವರಾಜ್ಯ ಮತ್ತು ದೇಶಭಕ್ತಿಯ ಬಗ್ಗೆ ಅವರದೇ ಆದ ವಿಶಿಷ್ಟ ವಿಚಾರಗಳಿವೆ.

೩) ರೈತ ಚಳುವಳಿ ಬ್ಯಾಂಕ್ ಕಟ್ಟೆ ಏರಿತು!

– ಸುರೇಂದ್ರ ಕೌಲಗಿ ಪುಟ – ೧೨

ರೈತರ ಸಹಾಯಕ್ಕಾಗಿ ಬ್ಯಾಂಕುಗಳಿವೆ ಎಂಬುದಾಗಿ ಸರ್ಕಾರ ಘೋಷಣೆ ಮಾಡುತ್ತದೆ. ಆದರೆ ವಾಸ್ತವವಾಗಿ ಬ್ಯಾಂಕುಗಳು ರೈತರ ಮತ್ತು ಇತರ ಕಾರ್ಮಿಕರ ಜೀವವನ್ನು ಹಿಂಡುವಂಥ ಗಾಣಗಳಾಗಿವೆ. ಈ ವಿಷಯ ಕುರಿತು ಕೆಲವು ಆಲೋಚನೆಗಳು ಈ ಲೇಖನದಲ್ಲಿವೆ.

೪) ಬ್ರಹ್ಮರ್ಷಿ, ರಾಜರ್ಷಿ ಮತ್ತು ದೇವರ್ಷಿಗಳ ಪರಿಚಯ

– ವಿನೋಬಾ ಪುಟ – ೧೬

ಭಾರತ ಭೂಮಿ ಅನೇಕ ಋಷಿಗಳಿಗೆ ಜನ್ಮ ಕೊಟ್ಟ ದೇಶ. ಭಾರತೀಯ ಸಂಸ್ಕೃತಿ ಈ ಎಲ್ಲ ಋಷಿಗಳಿಗೆ ಚಿರಋಣಿಯಾಗಿದೆ. ಅಂಥ ಋಷಿಗಳ ಬಗೆಗಿನ ಕಿರು ಪರಿಚಯ ಈ ಲೇಖನ.

೫) ಗಾಂಧೀ ತತ್ವ ಪ್ರಭಾವಿತ ಕೃಷಿ ಪಂಡಿತ : ಚೇರ್ಕಾಡಿ ರಾಮಚಂದ್ರರಾಯರು

– ಆರೂರು ಮಂಜುನಾಥರಾವ್ ಪುಟ – ೨೦

ಕೃಷಿ ಕ್ಷೇತ್ರದ ವೈಶಿಷ್ಟ್ಯವೆಂದರೆ ಅಲ್ಲಿ ಯುವಕರೂ ಕಾಯಕ ಮಾಡಬಹುದು, ವೃದ್ಧರೂ ಕಾಯಕ ಮಾಡಬಹುದು. ಆದರೆ ಕೆಲವು ಯುವಕರು ಕೃಷಿ ಮಾಡುತ್ತಾ ವೃದ್ಧರಾಗುತ್ತಾರೆ. ಆದರೆ ಇನ್ನು ಕೆಲವು ವೃದ್ಧರು ಕೃಷಿ ಮಾಡುತ್ತಾ ಯುವಕರಾಗುತ್ತಾರೆ. ಇಂಥ ಓರ್ವ ತೊಂಭತ್ತರ ಪ್ರಾಯದ ಕೃಷಿ ಯುವಕನ ಸಾಧನೆಯನ್ನು ಈ ಲೇಖನ ತಿಳಿಸುತ್ತದೆ.

೬) ಜನಪದ ವ್ಯಕ್ತಿ : ಎಚ್.ಐ.ವಿ. ಬಾಧಿತರಿಗಾಗಿ ಮಿಡಿದ ವೀಣಾ

– ಬಿ.ಎಂ.ಲತಾ ಪುಟ – ೨೪

ಎಚ್.ಐ.ವಿ. ಸೋಂಕಿನ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಅಸಾಧಾರಣವಾಗಿ, ಅಪ್ರತಿಮವಾಗಿ ಮಾಡಿ ಬೇರೆ ಕಾರ್ಯಕರ್ತರಿಗೆ ಮಾದರಿಯಾದ ವೀಣಾಧರಿಯವರ ವ್ಯಕ್ತಿ ಪರಿಚಯವಿದು.

೭) ಜನಪದ ನಿಲಯದ ಅಂತರಂಗದಲ್ಲಿ ... ೫೦ ಪುಟ – ೩೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಜನೆವರಿ-೨೦೦೮
ಸಂಪುಟ-೮
ಸಂಚಿಕೆ-೬

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್ ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ ೦೮೨೩೬ ೨೯೮೭೫೪
e-mail - janapada@yahoo.com

ಅವ್ವ

ವರ್ತಮಾನದ ಬಸಿರಲಿ
ಭವಿಷ್ಯತ್ತಿಗೆ ಜನ್ಮ ನೀಡಿದ ಅವ್ವ
ಬೆವರು ಬಸಿದು, ರಕ್ತ ಹನಿಸಿ
ಮೂಳೆ ಮಜ್ಜೆಗಳಿಗೆ ಶಕ್ತಿ ನೀಡಿದವಳು
ಕತ್ತರಿಸಿದ ಹೊಕ್ಕಳ ಹುರಿಗೆ
ಗಂಟು ಹಾಕಿಕೊಂಡಳು
ನಿಂತ ನೆಲದಲ್ಲೇ ಬಿಳಲು ಬಿಟ್ಟ
ಆಲದಂತಿರುವ ಅವ್ವ
ರೆಂಬೆ ಕೊಂಬೆಗೆ
ಕರುಳ ಬಳ್ಳಿಗಳ ಹಬ್ಬಿಸಿದಳು
ರೆಕ್ಕೆ ಬಲಿಯದ ಹಕ್ಕಿಗೆ ಗೂಡಾದಳು
ಹಟ ಹಿಡಿದ ರಾಮನಿಗೆ ಕನ್ನಡಿಯಲಿ
ಚಂದಿರನ ತೋರಿಸಿದ ಅವ್ವ
ಹಟಕ್ಕಾಗಿ ಬದುಕು ಪಣವಿಟ್ಟ
ಸುಯೋಧನನಿಗೆ ಕಣ್ಣಿದ್ದೂ ಕುರುಡಾದಳು
ಕಪ್ಪು ಹೊಲದಲ್ಲಿ, ಹಸಿರು ಬೆಳೆ ತೆಗೆದ ಅವ್ವ
ಫಸಲು ಕಟಾವಾದಾಗ ಮನದಲ್ಲಿ ಬಿಕ್ಕಿದಳು
ಒಟ್ಟಿಕೊಂಡ ರಾಶಿ ಪರರ ಪಾಲಾದಾಗ
ಒಂಟಿಯಾಗಿ ಅತ್ತಳು
ಅಳುವ ತುಟಿಗಳಿಗೆ ಮಂದಹಾಸ
ಮೂಡಿಸಿದಳು
ನೋವ ವಿಷವುಂಡು ನಂಜುಡನಂತಿರುವ ಅವ್ವ
ವಿಷ ನೀಡಿದವರಿಗೂ ಅಮೃತ ಹನಿಸಿದಳು
ಸೋತ ಹೆಜ್ಜೆಗಳಿಗೆ ಬಲ ನೀಡಿ ಗಮ್ಯವನು
ಅಣಿಗೊಳಿಸಿದ ಅವ್ವ,
ನಿಂತ ನಿಲುವಿನಲಿ ಮೈಲಿಗಲ್ಲಾದಳು
ಭವಿಷ್ಯತ್ತಿಗೆ ಭಾಷ್ಯ ಬರೆಯುವ ಅವ್ವ
ಕಳೆದು ಹೋಗುತ್ತಾಳೆ ಭೂತದ ಕನವರಿಕೆಗಳಲಿ
ನಿಂತಲ್ಲಿಯೆ ಮುಗಿಲ ಮಲ್ಲಿಗೆಯಾಗುವ ಅವ್ವ
ಬೆಳದಿಂಗಳಿನಲ್ಲಿ ಚುಕ್ಕೆಯಾಗಿ ಮಿನುಗುತ್ತಾಳೆ.

– ವೀಣಾ ಕುಲಕರ್ಣಿ

ವಿಚಾರ ದೀಪ್ತಿ

ನಾಡಿನಲ್ಲಿ ಹಿಂಸೆ ಹೆಚ್ಚುತ್ತಿರುವುದು ಎಲ್ಲರಿಗೂ ಆತಂಕವನ್ನು ಉಂಟುಮಾಡುವ ಸಂಗತಿ. ಇದಕ್ಕೆ ಹಲವಾರು ಕಾರಣಗಳುಂಟು. ಈ ದೇಶ ಮತ್ತು ಆಳಿದವರ ಹೊಣೆಗಾರಿಕೆ ಏನೂ ಸ್ವಲ್ಪವಲ್ಲ. ತಮ್ಮ ಕಣ್ಣೆದುರಿಗೇ ಕೋಟಿ ಕೋಟಿ ರೂಪಾಯಿಗಳನ್ನು ಅಧಿಕಾರಕ್ಕಾಗಿ ಅಥವಾ ತಮ್ಮ ಪ್ರತಿಷ್ಠೆಗಾಗಿ ಅಥವಾ ಭೋಗಕ್ಕಾಗಿ ಚೆಲ್ಲುತ್ತ ಎಲ್ಲಾ ಅಪರಾಧಗಳನ್ನು ಮಾಡಿ ಕೆಲವರು ಮೆರೆಯುತ್ತಿರುವಾಗ, ಎರಡು ಹೊತ್ತು ಊಟ, ಮೈತುಂಬಾ ಬಟ್ಟೆ, ಶೌಚಾಲಯ ಇರುವ ಒಂದು ಮನೆ, ಪ್ರಾರಂಭದ ಶಿಕ್ಷಣ, ಆರೋಗ್ಯ ಇವಗಳೂ ಇಲ್ಲದಿರುವವರು ಹಿಂಸಾಚಾರಕ್ಕೆ ಎಳಸುವದರಲ್ಲಿ ಆಶ್ಚರ್ಯವೇನು? ಅತ್ಯಂತ ಘೋರ ಅಪರಾಧಗಳ ವಿಚಾರಣೆಯು ದಶಕಗಳಗಟ್ಟಲೆ ನಡೆದಾಗ ಯುವ ಜನಾಂಗಕ್ಕೆ ನ್ಯಾಯ ವ್ಯವಸ್ಥೆಯಲ್ಲಿ ವಿಶ್ವಾಸ ಉಳಿಸುವುದು ಹೇಗೆ? ನ್ಯಾಯ ತೀರ್ಮಾನಕ್ಕೆ ಅಪಮಾನ ಮಾಡಿ ಕೊಲೆ ಮಾಡಿದಂತೆ. ಇದೇ ಮಾತು ತೀರ್ಮಾನಗಳನ್ನು ಕೈಗೊಳ್ಳುವ ಅಧಿಕಾರಿಗಳಿಗೂ ಅನ್ವಯಿಸುತ್ತದೆ. ನಡೆತೆಯ ಔಚಿತ್ಯ, ಕನಿಷ್ಠ ಪ್ರಮಾಣದ ನೈತಿಕತೆ, ನಾಚಿಕೆ, ಮಾನವೀಯತೆಗಳನ್ನು ಸಾರ್ವಜನಿಕವಾಗಿ ಗಾಳಿಗೆ ತೂರುವ ನಾಯಕರು, ಅಧಿಕಾರಿಗಳು ಇಂಥಾ ಸಿನಿಕತನದ ವಿಷವನ್ನು ಸಮಾಜದ ಬದುಕಿನ ಗಾಳಿಯಲ್ಲಿ ಬೆರೆಸುತ್ತಾರೆ. ಮಾರುತವನ್ನು ಬಿತ್ತಿ ಚಂಡಮಾರುತವನ್ನು ಬೆಳೆಸುವ ಈ ಸಮಾಜವು ಹಿಂಸೆಗೆ ಹೊಣೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ನಾವೆಲ್ಲ ಭ್ರಷ್ಟಾಚಾರದ ವಿರುದ್ಧವೇ ಇದ್ದೇವೆ, ಪ್ರಾಮಾಣಿಕತೆಯ ಪರವಾಗಿಯೇ ಇದ್ದೇವೆ. ಕನ್ನಡನಾಡಿನಲ್ಲಿ ಬಹು ಮಂದಿ, ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆ ಮತ್ತು ಘನತೆಗಳ ಪರವಾಗಿದ್ದಾರೆ, ನೇರ ನಡೆ ನುಡಿಗಳ ಪರವಾಗಿದ್ದಾರೆ. ಆದರೂ ಒಂದು ಕನಿಷ್ಠ ಪ್ರಮಾಣದ ಪ್ರಾಮಾಣಿಕತೆಯ ಭರವಸೆ ಇಲ್ಲದಿರುವುದೇಕೆ? ಪ್ರಾಯಶಃ, ಕಾರಣ ಇದು. ಧರ್ಮ, ನ್ಯಾಯ, ಪ್ರಾಮಾಣಿಕತೆ ಗೆಲ್ಲಬೇಕೆಂದು ಲಕ್ಷ ಲಕ್ಷ ಸಾತ್ವಿಕ ಜನ ಹಂಬಲಿಸುತ್ತಾರೆ. ಪ್ರಾಮಾಣಿಕವಾಗಿ ಹಂಬಲಿಸುತ್ತಾರೆ. ಆದರೆ ನ್ಯಾಯ, ಪ್ರಾಮಾಣಿಕತೆ ತಾವೇ ಗೆಲ್ಲಲಾರವು. ದ್ರೌಪದಿಯ ವಸ್ತ್ರಾಪಹರಣವಾಗುತ್ತಿದ್ದಾಗ ಕೈ ಕೈ ಹಿಸುಕಿಕೊಳ್ಳುತ್ತಿದ್ದ ಧರ್ಮಪರಾಯಣರಿಂದ ಏನೂ ಆಗಲಿಲ್ಲ. ಅವನ್ನು ಗೆಲ್ಲಿಸಬೇಕು, ಒಂದಿಷ್ಟು ಕೊತ್ತಂಬರಿ ಬೇಕೆಂದರೂ ಅದರ ಬೆಲೆಯನ್ನು ಒಂದು ರೂಪಾಯಿಯನ್ನೋ ಎರಡು ರೂಪಾಯಿಯನ್ನೋ ಕೊಡಬೇಕು. ಹಾಗಿರುವಾಗ ಸಾರ್ವಜನಿಕ ಜೀವನದಲ್ಲಿ ಸ್ವಚ್ಛತೆ ಮತ್ತು ಪ್ರಾಮಾಣಿಕತೆ ಗೆಲ್ಲಬೇಕಾದರೆ ಅದರ ಬೆಲೆಯನ್ನು ತೆರಬೇಡವೆ? ಬದುಕಿನಲ್ಲಿ ಪ್ರತಿಯೊಂದೂ ತನ್ನ ಬೆಲೆಯನ್ನು ಬೇಡುತ್ತದೆ. ಬೆಲೆ ತೆರದೆ ನಾವು ಏನನ್ನೂ ಪಡೆಯಲಾರೆವು. ಪ್ರಾಮಾಣಿಕತೆ, ನ್ಯಾಯ ಗೆಲ್ಲಬೇಕೆನ್ನುವ ಹಂಬಲ ಕ್ರಿಯಾಶೀಲವಾಗಬೇಕು. ಅವುಗಳಿಗಾಗಿ ಹೋರಾಡಲು ಸಿದ್ಧವಾಗಿರಬೇಕು. ಈ ಮನವಿಯನ್ನು ವಿಶೇಷವಾಗಿ ಯುವ ಜನತೆಗೆ ಮಾಡಿಕೊಳ್ಳುತ್ತೇನೆ. ಶೌರ್ಯ ಮತ್ತು ಸುರಕ್ಷತೆ ಒಟ್ಟಿಗೆ ಹೋಗಲಾರವು. ನಾವು ಅಧರ್ಮದೊಡನೆ ರಾಜಿ ಮಾಡಿಕೊಳ್ಳುತ್ತೇವೆ, ಧರ್ಮ ಗೆಲ್ಲಬೇಕೆಂದು ಹಂಬಲಿಸುತ್ತೇವೆ ಎಂದರೆ ಆಗದು. ನಾವು ಪ್ರಾಮಾಣಿಕತೆಯ, ನ್ಯಾಯದ ಪರವಾಗಿದ್ದರೆ ಅವುಗಳಿಗಾಗಿ ಕೂಡ ಯುದ್ಧಮಾಡಬೇಕು, ಬೆಲೆ ತೆರಬೇಕು. ಅಬ್ಬಕ್ಕ ತೆತ್ತಂತೆ, ಕಿತ್ತೂರಿನ ರಾಣಿ ತೆತ್ತಂತೆ, ಅಂಕೋಲದ ಸತ್ಯಾಗ್ರಹಿಗಳು ತೆತ್ತಂತೆ. ಆ ದಿಟ್ಟತನ ನಮ್ಮದಾಗಲಿ, ಕನ್ನಡನಾಡಿನ ಸಾರ್ವಜನಿಕ ಬದುಕನ್ನು ಅದರ ಜೀವಂತ ಸಂಸ್ಕೃತಿ ನಡೆಸಲಿ ಎಂದು ಹಾರೈಸುತ್ತೇನೆ.

– ಪ್ರೊ. ಎಲ್.ಎಸ್.ಶೇಷಗಿರಿರಾವ್

ವೇಗ + ಸ್ಪರ್ಧೆ + ಆಸೆ = ವಿನಾಶ

- ಸುರೇಂದ್ರ ಕೌಲಗಿ

ವಿಷಯ ಚಿಂತನೆಗೈಯಲು ಸಂಗ ಲಭಿಸುವುದವನಿಗೆ, ಸಂಗದಲಿ ತಾ ಕಾಮವದು ಕಾಮದೆಂದಲೇ ಕ್ರೋಧವು, ಕ್ರೋಧದಿಂದ ಮೋಹವು, ಮೋಹದಿಂದ ಅವಿವೇಕವು, ಅವಿವೇಕದಿಂಲೆ ಬುದ್ಧಿ ನಶಿಸಿ ಸರ್ವನಾಶವು ತಪ್ಪದು. - ಗೀತೆ

ಇಪ್ಪತ್ತೊಂದನೇ ಶತಮಾನ ವೇಗ, ಸ್ಪರ್ಧೆ ಮತ್ತು ಆಸೆಗಳ ಶತಮಾನವಾಗಿದೆ. ಆದ್ದರಿಂದ ಇಂದಿನ ಜನ ಜೀವನದಲ್ಲಿ ವೇಗ ಇಲ್ಲದಿದ್ದರೆ ಅದು ಜೀವನವೇ ಅಲ್ಲ ಎಂಬುದು ಸಾರ್ವತ್ರಿಕ ಅಭಿಪ್ರಾಯ. ವ್ಯಕ್ತಿಗತ ಜೀವನವೇ ಆಗಿರಬಹುದು, ಸಾಂಘಿಕ ಜೀವನವೇ ಆಗಿರಬಹುದು, ಅಲ್ಲಿ ವೇಗ ಇರಲೇಬೇಕು. ನಿರ್ದಿಷ್ಟ ವೇಗದ ಮಿತಿಯನ್ನು ಕಾಪಾಡಿಕೊಳ್ಳದೆ ಹೋದರೆ ಆ ವ್ಯಕ್ತಿ ಅಥವಾ ಸಂಘ ಹಿಂದುಳಿಯಬೇಕಾಗುತ್ತದೆ. ಈ ವೇಗವನ್ನು ಕಾಪಾಡಿಕೊಂಡು ಬರುವುದಕ್ಕೆ ಸಹಾಯಕವಾಗುವ ಪರಿಕರಗಳೂ ಸಮಾಜದಲ್ಲಿ ಸುಲಭವಾಗಿ ದೊರಕುತ್ತವೆ. ಅವುಗಳನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಬದಲಿಗೆ ಅವೇ ನಮ್ಮನ್ನು ಹುಡುಕಿಕೊಂಡು ಬರುವುದೂ ಉಂಟು. ಹಾಗೆ ಅವು ಹುಡುಕಿಕೊಂಡು ಬಂದಾಗ ನಾವು ಅವನ್ನು ಬಿಡುವಹಾಗಿಲ್ಲ. ಬಿಟ್ಟದ್ದೇ ಆದರೆ ನಾವು ಸ್ಪರ್ಧೆಯಿಂದ ದೂರ ಸರಿಯಬೇಕಾಗುತ್ತದೆ. ಸ್ಪರ್ಧೆಯಿಂದ ದೂರ ಸರಿಯುವುದೆಂದರೆ ನಮ್ಮ ಆಸೆಯನ್ನು ಮೂರಾಬಟ್ಟೆ ಮಾಡಿಕೊಂಡಂತೆ ಏಕೆಂದರೆ ಈ ಸ್ಪರ್ಧೆಯ ಯಶಸ್ಸಿನಲ್ಲೇ ನಮ್ಮ ಭಿವಿಷ್ಯ ಅಡಗಿಕೂತಿದೆ, ನಮ್ಮ ಸುರಕ್ಷತೆ ಅಡಗಿಕೂತಿದೆ. ನಮ್ಮ ಮನಸ್ಸಿನ ವೇಗಕ್ಕೆ ತೂಕದ್ದಾಗಿ ನಮ್ಮ ಶರೀರಕ್ಕೂ ವೇಗ ಬರುವ ಸಾಧ್ಯತೆಯನ್ನು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ನಮಗೆ ಒದಗಿಸಿಕೊಟ್ಟಿದೆ. ಅತಿ ವೇಗದಲ್ಲಿ ಚಲಿಸುವ ಜೆಟ್ ವಿಮಾನದಲ್ಲಿ ಕುಳಿತು ನಮ್ಮ ಭೂಮಿಯನ್ನು ಕೆಲವೇ ಗಂಟೆಗಳಲ್ಲಿ ಸುತ್ತಿ ಬರಬಹುದು. ಇನ್ನು ಹೆಚ್ಚು ವೇಗದ ಜೆಟ್ ವಿಮಾನಗಳ ತಂತ್ರಜ್ಞಾನಕ್ಕಾಗಿ ಎಲ್ಲ ಪ್ರಯತ್ನಗಳೂ ನಡೆದಿವೆ. ಆಕಾಶ ನೌಕೆ, ಕ್ಷಿಪಣಿ, ಚಂದ್ರಯಾನ ಮುಂತಾದ ವೈಜ್ಞಾನಿಕ ಪ್ರಯತ್ನಗಳಲ್ಲಿ ವೇಗಕ್ಕೆ ಮೊದಲ ಆದ್ಯತೆ ಇದೆ. ಇಲ್ಲಿ ವೇಗ ಶಾಸ್ತ್ರದ ಕಿಂಚಿತ್ ದೋಷ ಇಡೀ ಯೋಜನೆಯನ್ನೇ ವಿಫಲ ಮಾಡಬಹುದು. ಅಷ್ಟು ಮಹತ್ವದ್ದಾಗಿದೆ ವೇಗಶಾಸ್ತ್ರ. ಆಕಾಶದಲ್ಲಿಯ ವೈಜ್ಞಾನಿಕ ಸಾಧನೆಗಳಲ್ಲಿ ಉಪಯೋಗಿಸಿಕೊಳ್ಳಲಾಗುವ ವೇಗದ ತಂತ್ರಜ್ಞಾನವನ್ನೇ ಭೂಮಿಯ ಮೇಲಿನ ಸಾರಿಗೆ ಸಂಪರ್ಕ ವ್ಯವಸ್ಥೆಯಲ್ಲಿ, ಮಾಹಿತಿ ಕ್ಷೇತ್ರಗಳಲ್ಲಿ ಕೈಗಾರಿಕೆಗಳಲ್ಲಿ ಅಳವಡಿಸಿಕೊಳ್ಳಲಾಗುತ್ತದೆ. ಇದೆಲ್ಲದರ ಪರಿಣಾಮ ಶಿಕ್ಷಣ ಕ್ಷೇತ್ರದ ಮೇಲೂ ಆಗುತ್ತದೆ. ಶಿಕ್ಷಣ ಕ್ಷೇತ್ರ ಅಂದರೆ ಕೇವಲ ಶಾಲಾ-ಕಾಲೇಜು-

ವಿಶ್ವವಿದ್ಯಾನಿಲಯಗಳಲ್ಲ. ಅದು ಕೃಷಿಕ್ಷೇತ್ರವನ್ನೂ ಒಳಗೊಂಡಿರುತ್ತದೆ. ಆಗ ಎಲ್ಲಿ ನೋಡಿದರಲ್ಲಿ, ವೇಗ, ವೇಗ, ವೇಗ. ಪ್ರತಿಯೊಂದು ಕ್ಷಣಾರ್ಧದಲ್ಲಿ ಆಗಬೇಕು. ಗಗನ ನೌಕೆ ಹಾರಿಸುವಾಗ ಕ್ಷಣಗಣನೆ ಆಗುವಂತೆ ಇದು ಭೂಮಿಯ ಮೇಲಿನ ಮನಷ್ಯನ ಪ್ರತಿಯೊಂದು ವ್ಯವಹಾರದಲ್ಲೂ ಕ್ಷಣಗಣನೆ ಇರುತ್ತದೆ. ಅವನ ಅಗತ್ಯಗಳನ್ನು ಪೂರೈಸುವ ಸಾಧನ ಸಲಕರಣೆಗಳ ದಕ್ಷತೆ ಕ್ಷಣಗಣನೆಗಳ ಮೇಲೆಯೇ ಅವಲಂಬಿಸಿವೆ. ಯಾವ ಸಾಧನ ಸಲಕರಣೆಗಳು ವೇಗದ ಶಾಸ್ತ್ರಕ್ಕೆ ಒಳಗಾದ ಈ ಕ್ಷಣಗಣನೆಯ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತವೋ, ಅವು ಮಾತ್ರ ವಾಣಿಜ್ಯ, ವ್ಯಾಪಾರ, ಮತ್ತು ದೈನಂದಿನ ವ್ಯವಹಾರಿಕ ಕ್ಷೇತ್ರಗಳಲ್ಲಿ ಮನುಷ್ಯರಿಗೆ ಇಷ್ಟವಾಗುತ್ತವೆ. ಇಂಥವುಗಳನ್ನೇ ಅವನು ಖರೀದಿಸಲು ಬಯಸುತ್ತಾನೆ. ಗ್ರಾಹಕರ ಈ ಇಚ್ಛೆಯನ್ನು ಗಮನಿಸಿ ಕೈಗಾರಿಕೆಗಳು ತಮ್ಮ ಉತ್ಪಾದನೆಯನ್ನು ತಯಾರಿಸುತ್ತವೆ. ಇದಕ್ಕೆ ಉದಾಹರಣೆಯಾಗಿ ತರಾವರಿ ರೂಪದ ಮೊಬೈಲ್‌ಗಳ ಸಾಮ್ರಾಜ್ಯವನ್ನು ತೋರಿಸಬಹುದು. ಅಂತಯೇ ವಿಮಾನಗಳು, ರೈಲುಗಳು, ಕಾರುಗಳು, ಬಸ್ಸುಗಳು, ಮೋಟಾರ್ ಸೈಕಲ್‌ಗಳು, ದೂರದರ್ಶನದ ಚಾನಲ್‌ಗಳು ಇತ್ಯಾದಿ. ರೈಲುಗಳಲ್ಲಿ ಬುಲೆಟ್ ರೈಲುಗಳ ಆಗಮನವಾಗುತ್ತಿದೆ.

ವೇಗದ ಅಗತ್ಯತೆಯ ಇನ್ನೊಂದು ಕ್ಷೇತ್ರ ಶಸ್ತ್ರಾಸ್ತ್ರಗಳ ಕ್ಷೇತ್ರ. ಇಲ್ಲಿ ವೇಗವೇ ಪ್ರಾಣ ಮತ್ತು ತ್ರಾಣ. ಯಾವ ಕ್ಷಿಪಣಿ ಎಷ್ಟು ದೂರವನ್ನು ಎಷ್ಟು ಕೆಲವೇ ಕ್ಷಣಗಳಲ್ಲಿ, ಎಷ್ಟು ತೂಕದ ಸ್ಫೋಟಕ ಪದಾರ್ಥಗಳನ್ನು ತನ್ನ ತನ್ನ ಶಿರದಲ್ಲಿ ಇಟ್ಟುಕೊಂಡು ಎದುರಾಳಿ ದೇಶದ ಪ್ರದೇಶದಲ್ಲಿ ನುಗ್ಗಬಹದೆಂಬುದರ ಮೇಲೆ ಒಂದು ದೇಶದ ರಕ್ಷಣಾಶಕ್ತಿ ಹಾಗೂ ಸಮರದಲ್ಲಿ ಜಯಿಸುವ ಶಕ್ತಿ ಅವಲಂಬಿಸಿದೆ. ಈ ವೇಗದ ಶಾಸ್ತ್ರ ನಿತ್ಯ ಬೆಳೆಯುವ ಶಾಸ್ತ್ರವಾಗಿದೆ. ಈ ಶಾಸ್ತ್ರ ಬೆಳೆದಂತೆಲ್ಲ ಯುದ್ಧದ ಸಾಧ್ಯತೆಗಳು ಹೆಚ್ಚಾಗುತ್ತವೆ. ಆಕಾಶದಲ್ಲಿಯೂ, ಭೂಮಿಯ ಮೇಲೂ, ಮನೆಗಳಲ್ಲೂ ಮಾರಣಾಂತಕ ಅಪಘಾತಗಳು ಹೆಚ್ಚಾಗುತ್ತವೆ. ಯುದ್ಧಗಳಲ್ಲಿಗಿಂತ ಅಪಘಾತಗಳಲ್ಲಿ ಸಾಯುವವರ ಸಂಖ್ಯೆ ಹೆಚ್ಚಾಗುತ್ತಿದೆ.

ವೇಗದ ಹುಚ್ಚು ಎಷ್ಟಾಗಿದೆ ಎಂದರೆ ಅದು ಮನುಷ್ಯನ ಶಾಂತಿ, ನೆಮ್ಮದಿ, ಸಂತೋಷವನ್ನು ಹಾಳುಮಾಡಿ ಅವನನ್ನು ಹುಚ್ಚನನ್ನಾಗಿ ಮಾಡಿದೆ. ದಿನೇ ದಿನೇ ಹುಚ್ಚಾಸ್ಪತ್ರೆಗಳೂ ಹೆಚ್ಚಾಗುತ್ತಿವೆ. ಮನೋರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ.

ವೇಗವೆಂಬ ಈ ಮಹಾಮಾರಿಯ ಸಂತಾನ ಸ್ಪರ್ಧೆ. ಇಂದು ಸ್ಪರ್ಧೆ ಎಲ್ಲಿಲ್ಲವೆಂದು ಕೇಳುವ ಸ್ಥಿತಿ ಉಂಟಾಗಿದೆ. ದೇಶ-ದೇಶಗಳಲ್ಲಿ ಸ್ಪರ್ಧೆ ಉಂಟಾಗಿದೆ. ಈ ಸ್ಪರ್ಧೆ ಮುಖ್ಯವಾಗಿ ವಿನಾಶದ ಶಕ್ತಿಯುಳ್ಳ ಶಸ್ತ್ರಾಸ್ತ್ರಗಳನ್ನು ತಯಾರಿಸುವುದರಲ್ಲಿದೆ. ಈ ಸ್ಪರ್ಧೆಯ ಪರಿಣಾಮವಾಗಿ ಈಗ ಜಗತ್ತಿನಲ್ಲಿ ಪ್ರಪಂಚವನ್ನು ಐವತ್ತು ಬಾರಿ

ಧ್ವಂಸ ಮಾಡಬಹುದಾದ ಎಪ್ಪತ್ತು ಸಾವಿರ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳು ಬೇರೆ ಬೇರೆ ದೇಶಗಳಲ್ಲಿವೆ. ಇಂಥ ವಿಧ್ವಂಸಕರ ಶಸ್ತ್ರಗಳ ಸಂಖ್ಯೆ ಹೆಚ್ಚಾಗುತ್ತಿದೆಯೇ ವಿನಃ ಕಡಿಮೆಯಾಗುತ್ತಿಲ್ಲ. ಜಗತ್ತಿನ ದೊಡ್ಡ ದೇಶಗಳಾದ ಅಮೇರಿಕಾ, ರಶಿಯಾ, ಫ್ರಾನ್ಸ್, ಜರ್ಮನಿ ಮುಂತಾದ ದೇಶಗಳು ಹಿಂದುಳಿದಿರುವ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸುವುದನ್ನೇ ಒಂದು ಉದ್ಯಮವನ್ನಾಗಿ ಮಾಡಿಕೊಂಡಿವೆ. ಆ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನೂ, ಯುದ್ಧ ವಿಮಾನಗಳನ್ನೂ, ನೌಕೆಗಳನ್ನೂ ಮಾರುವುದರ ಮೂಲಕ ತಮ್ಮ ರಾಜಕೀಯ ಶಕ್ತಿಯನ್ನು ಹೆಚ್ಚಿಸಿಕೊಂಡಿವೆ.

ಸ್ಪರ್ಧೆಯ ಇನ್ನೊಂದು ಬಹು ಮುಖ್ಯ ಕ್ಷೇತ್ರ ಕೈಗಾರಿಕೆ. ಈ ಕ್ಷೇತ್ರದಲ್ಲಿ ಜಗತ್ತಿನ ಮುನ್ನೂರು ದೇಶಗಳೂ ಒಂದರ ವಿರುದ್ಧ ಇನ್ನೊಂದು ಸ್ಪರ್ಧೆಗೆ ಇಳಿದಿವೆ. ಜಾಗತೀಕರಣದ ಮಂತ್ರವನ್ನು ಎಲ್ಲ ದೇಶಗಳೂ ಜಪಿಸುತ್ತಿವೆ. ತತ್ಪರಿಣಾಮವಾಗಿ ಆಧುನಿಕ ನಾಗರೀಕತೆಯ ಮಾತಿನ ಹಿಂದೆ ಕಾಡಿನ ರೀತಿ ನೀತಿಗಳು ಜಾರಿಗೆ ಬಂದಿವೆ. ಅಂದರೆ ಕಾಡಿನಲ್ಲಿ ಹೇಗೆ ಬಲಿಷ್ಠ ಹಿಂಸಕ ಪ್ರಾಣಿಯೊಂದು ಇನ್ನೊಂದು ಪ್ರಾಣಿಯನ್ನು ಕಬಳಿಸಿಬಿಡುತ್ತದೋ ಹಾಗೆ; ಸಮುದ್ರದಲ್ಲಿ ದೊಡ್ಡ ಮೀನು ಚಿಕ್ಕ ಮೀನನ್ನು ತಿನ್ನುವ ಹಾಗೆ.

ಕೈಗಾರಿಕಾ ಕ್ಷೇತ್ರದಲ್ಲಿ ಸ್ಪರ್ಧೆಯೇ ಮುಖ್ಯವಾಗಿರುವುದರಿಂದ ನಿಧಾನಗತಿಯ ಕೃಷಿಗೆ ಅಲ್ಲಿ ಸ್ಥಾನವಿಲ್ಲ. ಯಾವಾಗ ಕೃಷಿ ಇಲ್ಲವೋ ಅಲ್ಲಿ ಸಂಸ್ಕೃತಿಯೂ ಇಲ್ಲ. ಆದರೆ ಕೈಗಾರಿಕಾಕರಣದ ಇಂದಿನ ನೀತಿ ಕೃಷಿಕರನ್ನು ಒಕ್ಕಲೆಬ್ಬಿಸುವದೇ ಆಗಿದೆ. ಇತ್ತೀಚಿಗೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ನಂದಿಗ್ರಾಮದಲ್ಲಿಯ ದುರಂತವಾದ ಮೇಲೂ ಹೇಳಿದ ಈ ಮಾತು ಕೈಗಾರೀಕರಣದ ಭ್ರಮೆ ಎಷ್ಟು ತೀವ್ರವಾಗಿದೆಯೆಂದು ತಿಳಿಸುತ್ತದೆ. "ಅಭಿವೃದ್ಧಿಯನ್ನು ಸಾಧಿಸಬೇಕಾದರೆ ನಾವು ಕೃಷಿಯನ್ನು ಅವಲಂಬಿಸಲು ಸಾಧ್ಯವಿಲ್ಲ. ಪ್ರಗತಿ ಸಾಧಿಸಲು ನಮಗೆ ಕೈಗಾರಿಕೆ ಬೇಕು. ಬಂಡವಾಳ ಹೊರ ದೇಶಗಳಿಂದಲೂ ಬರಬೇಕು"

ಸ್ಪರ್ಧೆಯ ಮುಖ್ಯ ಪರಿಣಾಮಗಳು ಹಲವಾರು. ಮೊಲನೆಯದು ಪ್ರಪಂಚದಾದ್ಯಂತ ಎಲ್ಲ ಜನರಲ್ಲಿ ಹಬ್ಬಿರುವ ಕೊಳ್ಳುಬಾಕ ಸಂಸ್ಕೃತಿ ಮತ್ತು ಭೌತಿಕವಾದ. ಇವೆರಡೂ ವಿಶ್ವವನ್ನೇ ನಾಶ ಮಾಡುವಷ್ಟರ ಮಟ್ಟಿಗೆ ಬೆಳೆದಿವೆ. ಇಲ್ಲಿ ಅಮೇರಿಕದ ಮಾಜಿ ಅಟಾರ್ನಿ ಜನರಲ್ ರಾಮಸೇ ಕ್ಲಾರ್ಕ್ ಹೇಳಿರುವ ಮಾತು ಇಂದಿನ ಪರಿಸ್ಥಿತಿಯ ನಗ್ನತೆಯನ್ನು ಎತ್ತಿ ತೋರಿಸುತ್ತದೆ. ಅವರ ಪ್ರಕಾರ ಕೊಳ್ಳಬಾಕತನ ಮತ್ತು ಭೌತಿಕತೆ ಶಸ್ತ್ರಬಲದ ಆಕ್ರಮಣಕ್ಕಿಂತ ಹೆಚ್ಚು ಮಾರಣಾಂತಿಕವಾಗಿವೆ. ಹಳೆ ಕಾಲದ ಸಾಮ್ರಾಜ್ಯಶಾಹಿಯಲ್ಲಿ ನಿಮಗೆ ನಿಮ್ಮ ಶತ್ರು ಯಾರೆಂಬುದುದಾದರೂ ಗೊತ್ತಾಗುತ್ತಿತ್ತು. ನಿಮ್ಮ ಬೆನ್ನ ಹಿಂದೆ ಹಾಕಿದ

ಚೂರಿ ನಿಮಗೆ ಗೊತ್ತಾಗುತ್ತಿತ್ತು. ಒಳ್ಳೆಯ ಬದುಕು ಬೇಕೆಂದರೆ ಏನು ಮಾಡಬೇಕೆಂಬುದೂ ಗೊತ್ತಾಗುತ್ತಿತ್ತು. ಹೊಸ ಕೊಳ್ಳುಬಾಕ ಸಂಸ್ಕೃತಿಯಲ್ಲಿ ನೀವು ಬಂಧಿತರಾಗಿದ್ದರೂ ಅದು ನಿಮಗೆ ಗೊತ್ತಾಗುವುದಿಲ್ಲ. ಕೈದಿಗೆ ತಾನು ಬೇಡಿಗಳಿಂದ ಬಂಧಿತನಾಗಿದ್ದೇನೆಂದು ಗೊತ್ತಿಲ್ಲವೆಂದಾದರೆ ನಿರಾಶೆ ಕಾದಿಟ್ಟಂತೆಯೇ. ನೀವು ಜಾಗತೀಕರಣದತ್ತ ನೋಡಿದರೆ ನೀವು ಕಲ್ಪನಾಲೋಕದಲ್ಲಿ ಮತ್ತು ಅಸೆಗಳಲ್ಲಿ ಪೂರ್ಣ ಬಂಧಿತರಾಗಿದ್ದೀರಿ. ಇದೇ ಅತ್ಯಂತ ಭೀಕರ ಅಪಾಯದ ಸಂಗತಿ.” ವಿಶ್ವದ ಎಲ್ಲಡೆ ಕಾಡುಗಳು ನಾಶ ಹೊಂದುತ್ತಿವೆ. ಕಾಡ್ಗಿಚ್ಚಿಗೆ ಬಲಿಯಾಗಿ ಉರಿದು ಬೂದಿಯಾಗುತ್ತಿವೆ. ಕಾಡುಗಳಲ್ಲಿ ಬೆಂಕಿಬೀಳುವುದಕ್ಕೆ ಮನುಷ್ಯನೇ ಕಾರಣನಾಗಿದ್ದಾನೆಂದು ಆಹಾರ ಮತ್ತು ವ್ಯವಸಾಯ ಸಂಸ್ಥೆಯ (FAO) ವರದಿ ತಿಳಿಸುತ್ತದೆ. ಕಾಡಿನ ನಾಶಕ್ಕೆ ಒಂದು ಬೀಡಿ ಅಥವಾ ಸಿಗರೇಟು ಸಾಕು. ಇದುವರೆಗೆ ಪೋರ್ಚುಗಲ್ಲಿನಲ್ಲಿ ೧೭,೦೦೦ ಹೆಕ್ಟೇರ್ ಕಾಡು ಬೆಂಕಿಗೆ ತುತ್ತಾಗಿದೆ. ಫ್ರಾನ್ಸ್‌ನಲ್ಲಿ ಬೆಂಕಿಯು ೪೫ ಸಾವಿರ ಹೆಕ್ಟೇರ್ ಅರಣ್ಯವನ್ನು ನಾಶಮಾಡಿದೆ. ರಶಿಯಾದಲ್ಲಿ ೨೩.೭ ದಶಲಕ್ಷ ಹೆಕ್ಟೇರ್ ಕಾಡು ನಾಶವಾಗಿದೆ. ಇದು ಇಂಗ್ಲೆಂಡ್ ದೇಶದ ವಿಸ್ತೀರ್ಣಕ್ಕೆ ಸಮ. ಅಮೇರಿಕಾದಲ್ಲಿ ೧೨.೮ ಮಿಲಿಯನ್ ಹೆಕ್ಟೇರ್ ಕಾಡು ನಾಶವಾಗಿದೆ. ಭಾರತದಲ್ಲಿ ಅರಣ್ಯ ಪ್ರದೇಶದ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ದೇಶದ ಭೂ ವಿಸ್ತಾರದ ಶೇಕಡಾ ೩೦ ರಷ್ಟು ಮಾತ್ರ ಕಾಡು ಉಳಿದಿದೆ.

ಕಾಡಿನ ನಾಶದ ಜೊತೆಗೆ ಜಲಮಾಲಿನ್ಯ, ವಾಯುಮಾಲಿನ್ಯ, ಭೂಮಾಲಿನ್ಯಗಳೂ ಆಗುತ್ತಿವೆ. ಈ ಎಲ್ಲ ಮಾಲಿನ್ಯತೆಗಳಿಗೆ ಸ್ಪಷ್ಟವಾದ ಕಾರಣ ಮನುಷ್ಯ ಈಗ ಬೆಳೆಸಿಕೊಂಡಿರುವ ಕೊಳ್ಳಬಾಕ ಸಂಸ್ಕೃತಿ. ಇದನ್ನು ಸಂಸ್ಕೃತಿ ಎಂದು ಕರೆಯಲೇಬಾರದು. ಇದು ಸಂಸ್ಕೃತಿಯಲ್ಲ ವಿಕೃತಿ. ಆದ್ದರಿಂದ ಇದನ್ನು ಕೊಳ್ಳಬಾಕ ವಿಕೃತಿ ಎಂದು ಕರೆಯುವುದೇ ಸೂಕ್ತ. ಏಕೆಂದರೆ ಈ ಕೊಳ್ಳಬಾಕ ವಿಕೃತಿಯಿಂದಲೇ ಭೂಮಿಯ ತಾಪಮಾನ ಹೆಚ್ಚಾಗುತ್ತಿದೆ. ಭೂಮಿಯ ಮೇಲಿನ ತಾಪಮಾನದಲ್ಲಿಯ ಹೆಚ್ಚಳದಿಂದಾಗಿ ಆಗುವ ಅನಾಹುತ ಒಂದಲ್ಲ, ಸಾವಿರ. ತಾಪಮಾನದ ಹೆಚ್ಚಳಕ್ಕೆ ಶ್ರೀಮಂತ ರಾಷ್ಟ್ರಗಳು ಕಾರಣವಾಗಿರುವಂತೆ ಪ್ರತಿಯೊಂದು ದೇಶದಲ್ಲಿಯ ಶ್ರೀಮಂತರೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕಾರಣವಾಗಿದ್ದಾರೆ. ದುರ್ದೈವದ ಸಂಗತಿ ಏನೆಂದರೆ ಈ ಕೊಳ್ಳಬಾಕ ವಿಕೃತಿಯು ಅವಕಾಶವಂಚಿತರ, ದುರ್ಬಲರ, ಬಡವರ ಅಸಹಾಯಕ ಪರಿಸ್ಥಿಯನ್ನೇ ತನ್ನ ಅಭಿವೃದ್ಧಿಯ ಬಂಡವಾಳವನ್ನಾಗಿ ಮಾಡಿಕೊಳ್ಳುವಂಥದು. ಉದಾಹರಣೆಗೆ ಎರಡನೇ ಮಹಾಯುದ್ಧವೇ ಅಮೇರಿಕಾವನ್ನು ಬಲಿಷ್ಠ ರಾಷ್ಟ್ರವನ್ನಾಗಿ ಮಾಡಿತು. ಸೋಜಿಗದ

ಸಂಗತಿ ಏನೆಂದರೆ ಆ ಯುದ್ಧವು ಅಮೇರಿಕಾದ ಭೂಮಿಯ ಮೇಲೆ ನಡೆಯಲೇ ಇಲ್ಲ! ಬದಲಿಗೆ ಆ ಯುದ್ಧವು ಅಮೇಕರಿಕಾಕ್ಕೆ ಆರ್ಥಿಕವಾಗಿ ಅನುಕೂಲತೆಯನ್ನೇ ಒದಗಿಸಿತು. ಆಗ ಇದ್ದ ತನ್ನ ಆರ್ಥಿಕ ಹಿಂಜರಿತವನ್ನು ನೀಗಿಸಿಕೊಳ್ಳಲು ಅಮೇರಿಕಾ ಆ ಯುದ್ಧವನ್ನು ಉಪಯೋಗಿಸಿಕೊಂಡಿತು ಪರಿಣಾಮವಾಗಿ ಜಪಾನ್ ನಾಶವಾಯಿತು, ರಷ್ಯಾ ಕೂಡಾ ಬಹಳಷ್ಟು ನಷ್ಟಕ್ಕೆ ಒಳಗಾಯಿತು.

ಸ್ಪರ್ಧೆಯ ಇನ್ನೊಂದು ಕ್ಷೇತ್ರ ಶಿಕ್ಷಣ ಕ್ಷೇತ್ರ, ಈ ಕ್ಷೇತ್ರದಲ್ಲಿ ತಲೆದೋರಿರುವ ಸ್ಪರ್ಧೆಯ ಕಾರಣದಿಂದಾಗಿ ಇಂದು ವಿದ್ಯಾರ್ಥಿಗಳು ಸಜೀವ ಸೃಜನಾತ್ಮಕ, ಕ್ರಿಯಾಶೀಲ ವ್ಯಕ್ತಿಗಳಾಗಿರದೆ ಕಂಪ್ಯೂಟರ್‌ನಂಥ, ರೋಬೋಟ್‌ನಂಥ ತಂತ್ರಾಶ ಚಾಲಿತ ಭೌತಿಕವಸ್ತುಗಳಂತಾಗಿದ್ದಾರೆ. ಈ ಸ್ಪರ್ಧೆಯು ಜನರ ಜೀವನದಲ್ಲಿಯ ಸಮಯವನ್ನು ಅಪಹರಿಸಿದೆ. ಸಮಯವೇ ಹಣವಾಗಿದೆ. ಆದ್ದರಿಂದ ಯಾರೂ ಯಾರೊಬ್ಬರಿಗೂ ಹತ್ತಿರವಾಗಿರದೆ ದೂರವಾಗಿದ್ದಾರೆ. ಮಾನವೀಯ ಸಂಬಂಧಗಳು ಕಳಚಿ ಬೀಳುತ್ತಿವೆ, ಮನುಷ್ಯನ ಜೀವನ ಶೂನ್ಯವಾಗುತ್ತಿದೆ, ಬರಡಾಗುತ್ತಿದೆ.

ಬರಡಾಗುತ್ತಿರುವ ಮನುಷ್ಯನ ಜೀವನದಲ್ಲಿ ಆಸೆ ತುಂಬಿಕೊಳ್ಳುತ್ತಿದೆ. ಈ ಆಸೆ ಮನುಷ್ಯನನ್ನು ದಾನವನನ್ನಾಗಿ ಮಾಡುತ್ತಿದೆ. ದಾನವನಾದವನಿಗೆ ಜೀವನದ ಯಾವ ಸೂಕ್ಷ್ಮತೆಗಳೂ, ನವಿರುಗಳೂ, ಭಾವನೆಗಳೂ, ಸೌಂದರ್ಯಗಳೂ ಅರ್ಥವಾಗುವುದಿಲ್ಲ. ಸುಂದರತೆಯೆಂದರೆ ಯಾವುದು ಸುಂದರತೆಯನ್ನು ನಿರ್ಮಿಸುತ್ತದೋ ಅದು. ಆದರೆ ಆಸೆಯೇ ಮುಖ್ಯವಾಗಿ ಹಣದಾಸೆಯ ಬೆನ್ನುಬಿದ್ದವರಿಗೆ ಈ ಮಾತು ಅರ್ಥವಾಗಲು ಸಾಧ್ಯವಿಲ್ಲ. ಪರಿಸರವಾದಿ ಬಿಟ್ಟೋ ಸಹೆಗಲ್ ಹೇಳುವಂತೆ ಪ್ರಕೃತಿಯ ರಕ್ಷಣೆಯಲ್ಲಿ ನಾವೆಲ್ಲರೂ ಕುಂಭಕರ್ಣರಾಗಿದ್ದೇವೆ. ಶಕ್ತಿ ತಜ್ಞರಾಗಿರುವ ಸುಜೋಯ್ ಬಸು ಪ್ರಕಾರ ಇಂಧನ ಅಥವಾ ಶಕ್ತಿ ಮತ್ತು ಶಸ್ತ್ರಾಸ್ತ್ರಗಳು ಬೇರೆ ಬೇರೆ ಎಂದು ತಿಳಿಯುವುದು ಮೂರ್ಖತನ ಅವೆರಡೂ ಸಯಾಮಿ ಅವಳಿಗಳಂತೆ. ಇದೆಲ್ಲಾ ಆಸೆಯ ಪರಿಣಾಮ.

ಹೀಗೆ ವೇಗ ಮತ್ತು ಸ್ಪರ್ಧೆ ಮತ್ತು ಆಸೆ ಇಂದು ಮಾನವಕುಲವನ್ನು ತಿಂದುಹಾಕುವ ಶಕ್ತಿಗಳಾಗಿವೆ. ಇವುಗಳ ವಿರುದ್ಧ ಹೋರಾಟ ಪ್ರಾರಂಭಿಸಬೇಕಿದೆ ವೇಗದ ವಿರುದ್ಧ ಸಂಯಮ, ಸ್ಪರ್ಧೆಯ ವಿರುದ್ಧ ಸಹಬಾಳ್ವೆ ಮತ್ತು ಆಸೆಯ ವಿರುದ್ಧ ಸಂವಿಭಾಗ ಎಂಬ ಮನೋವ್ಯಾಪಾರಗಳಿಂದ ಈ ಯುದ್ಧವನ್ನು ನಡೆಸಬೇಕಿದೆ ಇಲ್ಲವಾದಲ್ಲಿ ವಿನಾಶ ಖಂಡಿತ.

* * *

ಸಂಗೀತ ಕಲಾವಿದರು - ೨

ಜೋಡಿ ಗಾಯಕರಾದ ಡಿ.ಶೇಷಾಚಾರಿ ಮತ್ತು ಡಿ.ರಾಘವಾಚಾರಿ

ಹೈದರಾಬಾದ್ ಬಂಧುಗಳೆಂಬ ಹೆಸರಿನಿಂದ ಪ್ರಸಿದ್ಧರಾಗಿರುವ ಡಿ.ಶೇಷಾಚಾರಿ ಮತ್ತು ಡಿ.ರಾಘವಾಚಾರಿಯವರು ಪರಂಪರಾಗತ ಸಂಗೀತ ಪರಿವಾರದೊಂದಿಗೆ ಸಂಬಂಧವಿಟ್ಟುಕೊಂಡಿರುವಂಥವರಾಗಿದ್ದಾರೆ. ಇವರು ಸಂಗೀತದ ಪ್ರಾರಂಭಿಕ ಪ್ರಶಿಕ್ಷಣವನ್ನು ತಮ್ಮ ತಂದೆ ಸ್ವರ್ಗೀಯ ಡಿ.ರತನಮಾಚಾರ್ಯಲು ಅವರಿಂದ ಸಂಪಾದಿಸಿಕೊಂಡರು ಮತ್ತು ತ್ವರಿತವಾಗಿ ತಮ್ಮ ಜೀವದುಂಬಿದ ಮತ್ತು ಉತ್ಸಾಹಪೂರ್ಣ ಕಛೇರಿಗಳಿಂದ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿ ಮಾಡಿದರು. ಹೈದರಾಬಾದ್ ಸಹೋದರರು ದೇಶದ ಎಲ್ಲಡೆಯಲ್ಲದೆ ವಿದೇಶಗಳಲ್ಲಿಯೂ ಕೂಡ ಬಹು ಯಶಸ್ವಿ ಜೊತೆ ಹಾಡುಗಾರರೆಂಬ ಪ್ರತಿಷ್ಠೆಯನ್ನು ಸಂಪಾದಿಸಿಕೊಂಡಿದ್ದಾರೆ. ಅಲ್ಲದೆ ಅನೇಕ ಪ್ರಶಸ್ತಿಗಳನ್ನು ಮತ್ತು ಪದವಿಗಳನ್ನು ಪಡೆದಿದ್ದಾರೆ. ಧ್ವನಿಗಳ ಮಧುರ ಮಿಲನ, ಶಿಸ್ತುಬದ್ಧ ಮತ್ತು ನೈಪುಣ್ಯಪೂರ್ಣ ಪ್ರದರ್ಶನ, ಶ್ರೇಷ್ಠಮಟ್ಟದ ಶೃತಿ ಹೊಂದಾಣಿಕೆ ಇವು ಅವರ ಕಛೇರಿಯ ಕೆಲ ಆಕರ್ಷಕ ಲಕ್ಷಣಗಳಾಗಿವೆ. ಅವರು ಬಹು ದೊಡ್ಡ ಸಂಗೀತ ರಚನೆಗಳ ಭಂಡಾರವನ್ನೆ ಹೊಂದಿದ್ದಾರೆ. ಈ ಸಹೋದರರಲ್ಲಿ ಡಿ.ಶೇಷಾಚಾರಿ ಪ್ರಸ್ತುತ ಹೈದರಾಬಾದ್ ಆಕಾಶವಾಣಿ ಕೇಂದ್ರದ ಸಿಬ್ಬಂದಿ ವರ್ಗದಲ್ಲಿದ್ದಾರೆ ಮತ್ತು ನಿಲಯದ ಕಲಾವಿದರಾಗಿದ್ದಾರೆ.

ಸನ್ಮಾನ್ಯರಿಂದ . . .

೨೦೦೭ ಡಿಸೆಂಬರ್ ತಿಂಗಳ 'ಜನಪದ ವಿಚಾರ' ಚಂದಾದಾರರಾದ ನಮ್ಮ ಕೈಸೇರಿದೆ. ಎಂದಿನಂತೆಯೇ ವಿಚಾರಪೂರ್ಣ ಲೇಖನಗಳನ್ನೊಳಗೊಂಡಿದೆ ಪತ್ರಿಕೆ. ಈ ಪತ್ರಿಕೆಯಲ್ಲಿ 'ಸಂಗೀತ ಕಲಾವಿದರು' ಎಂಬ ವಿಭಾಗದಲ್ಲಿ ಶ್ರೀಮತಿ ಡಾ.ಎನ್.ರಾಜಮ್ ಅವರನ್ನು ಪರಿಚಯಿಸಿದ್ದೀರಿ. ಅದರಲ್ಲಿಯ ಮುಖ್ಯವಾದ ಒಂದು ದೋಷವನ್ನು ನಿಮ್ಮ ಅವಗಾಹನೆಗೆ ತರಲು ಬಯಸುತ್ತೇನೆ. ಆಕೆ ವೀಣಾವಾದಕಿಯಲ್ಲ. ಪಿಟೀಲು ವಾದನದಲ್ಲಿ ಪ್ರಾವೀಣ್ಯ ಪಡೆದು ಹೆಸರುವಾಸಿಯಾಗಿದ್ದಾರೆ. ಕಳೆದ ನಲವತ್ತೈದು ವರ್ಷಗಳಿಂದ, ಹಿಂದೂಸ್ಥಾನಿ ಶೈಲಿಯಲ್ಲಿ ಗಾಯಕಿ ಅಂಗದ ವೈಶಿಷ್ಟ್ಯದ ನೈಪುಣ್ಯತೆ ಪಡೆದ ಅವರ ವಯೊಲಿನ್ ವಾದನವನ್ನು ಕೇಳಿ ಆನಂದಿಸುತ್ತಿದ್ದೇವೆ. ಸುಮಾರು ಹನ್ನೆರಡು ವರ್ಷದ ಹಿಂದೆ ಸಾಂಗ್ಲಿ, ಮಿರಜ್‌ಗಳಲ್ಲಿ ಅವರ ವಯೊಲಿನ್ ವಾದನದ ಏರ್ಪಾಟಾಗಿತ್ತು. ಆಗ ನಮ್ಮ ಮನೆಯಲ್ಲಿಯೇ ಅವರನ್ನು ಉಳಿಸಿಕೊಂಡು ಆತಿಥ್ಯ ನೀಡುವ ಭಾಗ್ಯ ನಮ್ಮದಾಗಿತ್ತು. ನಿಮ್ಮ ಮುಂದಿನ ಸಂಚಿಕೆಯಲ್ಲಿ ನೀವು ತಿದ್ದುಪಡಿಯನ್ನು ಮಾಡಿ ಪ್ರಕಟಿಸುತ್ತೀರೆಂದು ಆಶಿಸುತ್ತೇನೆ.

- ಶೈಲಜಾ ತಿಳವಳ್ಳಿ, ಸಾಂಗ್ಲಿ.

* * *

ತಮ್ಮ ಸಂಸ್ಥೆಗೆ ಮಾಸಿಕ ಧನಸಹಾಯ ಮಾಡುವುದು ನನಗೆ ತುಂಬಾ ಸಂತಸಕೊಡುತ್ತದೆ. ತಮ್ಮ ಪತ್ರಿಕೆಯ ಎರಡು ಸಂಚಿಕೆಗಳು ಈಗಾಗಲೇ ಕೈಸೇರಿವೆ. ಲೇಖನಗಳು ತುಂಬಾ ಉಪಯುಕ್ತವಾಗಿವೆ. ಬಂದ ಕೂಡಲೇ ಓದಿಬಿಡುತ್ತೇನೆ.

- ಆರ್.ಅನಂತರಾವ್, ಬೆಂಗಳೂರು.

ಶಿಕ್ಷಣ, ಸ್ವರಾಜ್ಯ ಮತ್ತು ದೇಶಭಕ್ತಿಯ ಬಗ್ಗೆ ಗಾಂಧೀ ಮತ್ತು ಟಾಗೋರ್

- ಗುರುದಯಾಳ್ ಮಲ್ಲಿಕ್

ಓದುವುದು, ಬರೆಯುವುದು ಮತ್ತು ಗಣಿತ ಈ ಮೂರನ್ನು ಗಳಿಸುವುದೇ ಶಿಕ್ಷಣವೆಂದು ನಂಬಲಾಗಿದ್ದ ಕಾಲವೊಂದು ಭಾರತದಲ್ಲಿತ್ತು. ಅಲ್ಲದೆ ಈ ಮೂರನ್ನು ಅಧ್ಯಾಪಕನ ದೊಣ್ಣೆಯ ಸತತ ಉಪಯೋಗವಿಲ್ಲದೆ ಕಲಿಯಲು ಸಾಧ್ಯವಿಲ್ಲವೆಂದೂ ನಂಬಲಾಗಿತ್ತು. ಏಕೆಂದರೆ ಒಂದು ಶ್ಲೋಕದ ಪ್ರಕಾರ ಹೆಂಗಸು, ಮಗು ಮತ್ತು ಆಕ್ರೋಟದ ಮರ ಇವುಗಳು ಏಟು ತಿಂದಷ್ಟೂ ಉತ್ತಮವಾಗುತ್ತವೆ. ಇಂಥಾ ಒಂದು ಶಿಕ್ಷಣದ ಯೋಜನೆಯಲ್ಲಿ ಮತ್ತು ಪಠ್ಯಕ್ರಮದಲ್ಲಿ ಎಂದೂ ಅಥವಾ ಕ್ವಚಿತ್ತಾಗಿಯೂ ದೇವರಿಗೆ ಸ್ಥಾನವಿರಲಿಲ್ಲ. ಒಂದು ವೇಳೆ ಇದ್ದದ್ದೇ ಆಗಿದ್ದರೆ ತರಗತಿಯಿಂದ ದೊಣ್ಣೆಯು ಎಂದೋ ಗಡಿಪಾರಾಗುತ್ತಿತ್ತು. ಏಕೆಂದರೆ ಎಲ್ಲಿ ದೇವರಿಗೆ ಮಾನ್ಯತೆಯಿದೆಯೋ, ಗೌರವವಿದೆಯೋ ಅಲ್ಲಿ ಕೇವಲ ಪ್ರೇಮದ ವಾತಾವರಣ ಮತ್ತು ಪ್ರೇಮದ ವ್ಯವಹಾರ ಮಾತ್ರ ಇರಲಿಕ್ಕೆ ಸಾಧ್ಯ. ಏಕೆಂದರೆ ದೇವರೆಂದರೇನೇ ಪ್ರೇಮ. ನೂರಾರು ವರ್ಷಗಳಿಂದ ಭಾರತದಲ್ಲಿ ಶಿಕ್ಷಿತ ಮನುಷ್ಯನನ್ನು ಓರ್ವ ಲೇಖಣಿಗಾರ ಅಥವಾ ಮೊಹರು ಎಂದೆಲ್ಲ ಬಣ್ಣಿಸಲಾಗುತ್ತಿತ್ತು. ಅವನ ಮಾನಸಿಕ ಪರಿಸರ ಒಂದು ಆಡಳಿತ ಕಛೇರಿಯಂತಿತ್ತು. ವ್ಯಕ್ತಿತ್ವಕ್ಕೆ ಸ್ಥಾನವಿಲ್ಲ; ಪ್ರಶ್ನಾತೀತ ಆಜ್ಞಾಪಾಲನೆಯೇ ಅಲ್ಲಿಯ ನಿಯಮ. ಆದ್ದರಿಂದ ಶಿಕ್ಷಿತ ನೌಕರನೊಬ್ಬ ತನ್ನ ಯಜಮಾನನ ಮೊಹರು ಅಥವಾ ಅವನ ಧ್ವನಿ ಮಾತ್ರ ಆಗಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ವಾಸ್ತವವಾಗಿ ಆ ಸುಶಿಕ್ಷಿತ ನೌಕರ ಸ್ವಾಭಿಮಾನಿ ಆದವನೂ ಮತ್ತು ತನ್ನನ್ನು ಇಂಥವನೆಂದು ಪರಿಚಯಿಸಿಕೊಳ್ಳುವ ವ್ಯಕ್ತಿಯೂ ಆಗಬೇಕಿದ್ದ.

ಆದ್ದರಿಂದ ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಗುರುದೇವರು ಪಶ್ಚಿಮ ಬಂಗಾಳದ ಶಾಂತಿನಿಕೇತನದಲ್ಲಿ ಒಂದು ಶಿಕ್ಷಣ ಸಂಸ್ಥೆ ಪ್ರಾರಂಭಿಸಿದರು. ಅಲ್ಲಿ ವಿದ್ಯಾರ್ಥಿಗಳು ಪ್ರಕೃತಿಯ ಸಂಗದಲ್ಲಿ ವ್ಯಾಸಂಗ, ಕೆಲಸ ಹಾಗೂ ಪೂಜೆಯಲ್ಲಿ ಜೊತೆಗಾರರಾಗಿ ಪರಸ್ಪರರನ್ನು ಗೌರವಿಸುತ್ತಾ, ಪರಸ್ಪರರಿಗೆ ಸಹಾಯ ಮಾಡುತ್ತಾ ಸಮಾಜದ ಮೇಲೆ ಪ್ರಭಾವ ಬೀರುವಂಥವರಾಗಿದ್ದರು. ತನ್ಮೂಲಕ ವಿದ್ಯಾರ್ಥಿಗಳನ್ನು ಅವರಿಗೆ ಅರಿವಿಲ್ಲದಯೆ ಪರಮಾತ್ಮನ ಅರಿವು ಹೊಂದಿದವರನ್ನಾಗಿ ಮಾಡಲಾಗುತ್ತಿತ್ತು. ಈ ಪ್ರಕ್ರಿಯೆಯಲ್ಲಿ ಕಲೆ ಮತ್ತು ಸಂಗೀತ ಬಹು ಮೌಲಿಕ ಸಾಧನಗಳಾಗಿದ್ದವು. ಇದರ ಪರಿಣಾಮ ಪ್ರಜ್ಞಾಪೂರ್ವಕವಾದ ಆತ್ಮ ನಿರ್ಭರತೆ ಮತ್ತು ಸ್ವನಿಯಂತ್ರಣ. ಇವು ಹೃದಯ, ಮಸ್ತಿಷ್ಕ ಮತ್ತು ಹಸ್ತ ಈ ಮೂರರಲ್ಲಿ ಅನ್ಯೋನ್ಯತೆಯನ್ನು ತರುವುದರಲ್ಲಿ ಸಾಫಲ್ಯತೆ ಪಡೆಯುತ್ತಿದ್ದವು. ಅನುಭಾವಿಗಳು ಹೇಳುವಂತೆ ಈ ಅನ್ಯೋನ್ಯತೆ ನಿಜ ಆತ್ಮಿಕ ಭಾವನೆಯನ್ನು ಪಡೆಯುತ್ತಿತ್ತು. ಅದು ಹೊಸ ವಿಚಾರಗಳಿಗೆ ಆತಿಥ್ಯ, ಅಪರಿಚಿತರಿಗೆ ಆತಿಥ್ಯ. ವಿರಾಮಕಾಲದಲ್ಲಿ ತನ್ನ ಸ್ವಂತಕ್ಕೆ ಆತಿಥ್ಯ. ಆತಿಥ್ಯದ ಸಾಧನೆಗಾಗಿ ಗುರುದೇವರು ಹೆಚ್ಚಾಗಿ ಕಲೆಯನ್ನು ಅವಲಂಬಿಸಿದ್ದರು. ಆದರೆ ಗಾಂಧೀಜಿಯವರ ಜೀವನ ಶಿಕ್ಷಣದ ಯೋಜನೆಯು ಹೆಚ್ಚಾಗಿ ಉದ್ಯೋಗ ಕೇಂದ್ರಿತವಾಗಿತ್ತು. ಹಾಗಾಗಿ ಶಾಂತಿನಿಕೇತನ ಹಾಡುವಿಕೆಯ ಸಂತೋಷ ಮತ್ತು ಚಿತ್ರ ಬರೆಯುವಿಕೆಯ ಸಂತೋಷಕ್ಕೆ ಸಾಕ್ಷಿಯಾಗಿತ್ತು. ಸೇವಾಗ್ರಾಮ ವಸ್ತುಗಳ ನಿರ್ಮಾಣದಲ್ಲಿಯ ಸಂತೋಷಕ್ಕೆ ಸಾಕ್ಷಿಯಾಗಿತ್ತು. ಈ ಎರಡೂ ಸಂಸ್ಥೆಗಳಲ್ಲಿ

ಆ ಸಂತೋಷ ಸಮಾಜದ ಸಂದರ್ಭದಲ್ಲಿ ಇದ್ದಂಥವಾಗಿದ್ದವು. ಏಕೆಂದರೆ ಶಿಕ್ಷಣ ಕೇವಲ ಜೀವನ ಹೊರೆಯುವುದಕ್ಕಿಂತ ಹೆಚ್ಚಿನದುದಾಗಿದೆ. ಅದು ಬೇರೊಬ್ಬರೊಂದಿಗೆ ಮತ್ತು ಬೇರೊಬ್ಬರಿಗಾಗಿ ಇರುವುದನ್ನು ಕಲಿಸುವುದಾಗಿದೆ. ಆದುದರಿಂದ ಗುರಿ ಕೇವಲ ವಿವಿಧ ಮನುಷ್ಯ ಕ್ಷೇತ್ರಗಳಲ್ಲಿ ಯಶಸ್ಸನ್ನು ಪಡೆಯುವುದಾಗಿರದೆ ಆತ್ಮಸಾರ್ಥಕತೆಯಾಗಿದೆ. ನಿಜವಾಗಿ ಶಿಕ್ಷಣ-ಯೋಗ ಅಂದರೆ ಭಗವತ್ ಸಾಕ್ಷಿಯೊಂದಿಗೆ ಮಾನವನ ಐಕ್ಯತೆಯೇ ಆಗಿದೆ. ತನ್ಮೂಲಕ ಸಮಾಜದೊಂದಿಗಿನ ಐಕ್ಯತೆ ಅಂದರೆ ಅದ್ವೈತ ಭಾವನೆಯನ್ನು ವೃದ್ಧಿಸುವುದು, ಪ್ರಚುರಪಡಿಸುವುದು.

ಸ್ವರಾಜ್ಯವೆಂಬುದು ಒಂದು ಆಧ್ಯಾತ್ಮಿಕ ಮೌಲ್ಯ. ಗುರುದೇವರು ಅದನ್ನು ಆತ್ಮಿಕ ಸ್ವಾತಂತ್ರ್ಯವೆಂದು ಕರೆದರು. ಅದನ್ನೇ ಗಾಂಧೀಜಿ ಆತ್ಮಿಕ ಶಕ್ತಿಯೆಂದು ಕರೆದರು. ಆದ್ದರಿಂದ ಒಂದು ದೇಶದ ಸಮಗ್ರ ಜೀವನ ಅಂತಿಮವಾಗಿ ಈ ಸತ್ಯವನ್ನು ಅರಿಯುವುದಕ್ಕಾಗಿ ಮತ್ತು ಅದಕ್ಕೋಸ್ಕರ ಪುನರ್ ರಚಿತಗೊಳ್ಳುವುದಕ್ಕಾಗಿಯೇ ಇರಬೇಕು. ಭಾರತದ ಸ್ವಾತಂತ್ರ್ಯಕ್ಕಾಗಿ ಒತ್ತಾಸೆಯನ್ನೂ, ಉತ್ಸಾಹವನ್ನೂ ಗುರುದೇವರು ತಮ್ಮ ಹಾಡುಗಳ ಮೂಲಕ ಪ್ರೇರೇಪಿಸಿದರು. ಗಾಂಧೀಜಿ ಜನತೆಯ ಸಮಗ್ರ ಹಿತಕ್ಕಾಗಿ ದೇಶಾಭಿಮಾನದ ಸ್ಫೂರ್ತಿಯನ್ನು ರಚನಾತ್ಮಕ ಕೆಲಸದ ಮೂಲಕ ಘನೀಕರಿಸಿದರು. ಹೀಗೆ ಅವರಿಬ್ಬರೂ ಪರಸ್ಪರ ಹೊಂದಾಣಿಕೆ ಮಾಡಿಕೊಂಡು ದೇಶಕ್ಕೆ ಸ್ವಾತಂತ್ರ್ಯ ತರಲು ಪ್ರಯತ್ನಿಸಿದರು ಮತ್ತು ಇತಿಹಾಸದ ಕೈಯಲ್ಲಿ ನುರಿತ ಸಾಧನಗಳಾದರು.

ಆದರೆ ಇತಿಹಾಸವೆಂದರೇನು? ಒಮ್ಮೆ ಒಬ್ಬ ಶಾಲಾ ಬಾಲಕ ಹೇಳಿದಂತೆ ಅದು "ಅವನ ಕಥೆ." ಅದು ದೇವರಿಚ್ಛೆಯ ಕಥೆ. ಶತಮಾನಗಳ ಮೂಲಕ ಹಾದುಬಂದ ಮಾನವತೆಯ ವಿಕಾಸದ ಪ್ರಕ್ರಿಯೆಯು ಪ್ರತ್ಯಕ್ಷ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡ ಕಥೆ. ಆದಾಗ್ಯೂ ಸ್ವಾತಂತ್ರ್ಯ ಪಡೆಯಲು ಮತ್ತು ಆ ಸ್ವಾತಂತ್ರ್ಯವನ್ನು ರಾಷ್ಟ್ರ ಜೀವನದಲ್ಲಿ ಮಿಳಿತಗೊಳಿಸಲು ದೂರ ದೃಷ್ಟಿಯ ಕವಿ ಮತ್ತು ಕ್ರಿಯಾಶೀಲ ವ್ಯಕ್ತಿ ಅನಿವಾರ್ಯವೆಂಬ ಸಂಗತಿಯನ್ನು ದೃಢೀಕರಿಸುತ್ತದೆ. ಸ್ವಾತಂತ್ರ್ಯವೆಂಬುದು ಆಧ್ಯಾತ್ಮಿಕ ಮೌಲ್ಯವೆಂದಾದರೆ ಅದರ ಪ್ರತಿಪಾದಕರು ಮತ್ತು ಅದಕ್ಕಾಗಿ ಕೆಲಸ ಮಾಡುವವರು ನಮ್ಮಂತೆಯೇ ಚೈತನ್ಯಪೂರ್ಣ ವ್ಯಕ್ತಿಗಳಾಗಿರಬೇಕೆಂದು ಗುರುದೇವ ಮತ್ತು ಗಾಂಧೀಜಿ ನಂಬಿದ್ದರು. ಏಕೆಂದರೆ ಜನರ ಹೃದಯವನ್ನು ನಿಜವಾಗಿ ಮತ್ತು ಆಳವಾಗಿ ಸ್ಪರ್ಶಿಸುವಂಥವು ಆಧ್ಯಾತ್ಮಿಕ ಹಾಡುಗಳು ಮತ್ತು ಉತ್ಸಾಹ ಪ್ರೇರಿತವಾದ ಕಣ್ಣು ಕೋರೈಸುವ ಉದಾಹರಣೆಗಳು ಅಥವಾ ಕೃತಿಗಳು. ಆದರೆ ಪ್ರತಿಯೊಬ್ಬನೂ ತನ್ನ ಕರ್ತವ್ಯದ ಬಗ್ಗೆ ಹೊಂದಿರಬೇಕಾದ ಹೊಣೆಗಾರಿಕೆ ಮತ್ತು ಕರ್ತವ್ಯಗಳನ್ನು ಸ್ವರಾಜ್ಯ ಜಾಗೃತಗೊಳಿಸುತ್ತದೆ. ಆ ಜಾಗೃತಿ ಪುನಃ ಆಧ್ಯಾತ್ಮಿಕ ಪ್ರಕ್ರಿಯೆ ಮತ್ತು ಅದರ ನಿಷ್ಪತ್ತಿಯೇ ಆಗಿರುತ್ತದೆ. ಆದ್ದರಿಂದ ಸ್ವರಾಜ್ಯ ಕೂಡ ಒಂದು ಧರ್ಮ. ಆದ್ದರಿಂದ ಸ್ವಾತಂತ್ರ್ಯ ಮತ್ತು ಧರ್ಮ ದೇಶಾಭಿಮಾನಿಯೂ ಮತ್ತು ಧಾರ್ಮಿಕ ಪುರುಷನೂ ಆದವನು ಬೇರೆಯವರಿಗೆ ತನ್ನನ್ನು ಮತ್ತು ತನ್ನಲ್ಲಿಯ ಸಂಗ್ರಹಿತ ಭೌತಿಕ ವಸ್ತುಗಳನ್ನ ಹೆಚ್ಚೆಚ್ಚಾಗಿ ಕೊಡಲು ಒತ್ತಾಯಿಸುತ್ತದೆಯೇ ಹೊರತು ತಾನೇ ಬೇರೆಯವರಿಂದ ಕಬಳಿಸಿಕೊಂಡು ಮುಂದುವರೆಯುವುದನ್ನಲ್ಲ.

ಒಟ್ಟಿನಲ್ಲಿ ಸ್ವರಾಜ್ಯದ ಆತ್ಮ ಮಾನವಕುಲದ ಸೇವೆಗಾಗಿ ಸ್ವಯಂ ಅರ್ಪಿಸಿಕೊಂಡ ಅವಿರತ ಹೋರಾಟ ನಡೆಸುವ ಚೇತನ. ಏಕೆಂದರೆ ಅಂಥ ಉತ್ಕಟತೆ, ಮೂಲದ್ರವ್ಯ, ಮನೋಇಚ್ಛೆ ಮತ್ತು ಕ್ರಿಯಾಶೀಲತೆ ಉದಾರ ಮನೋಭಾವದ ಶಿರಪ್ರಾಯವಾಗಿದೆ. ದೇವರೆಂದರೆ ನೀನು ಮತ್ತು ನಾನು; ಎಲ್ಲರನ್ನೂ ಒಳಗೊಂಡಂಥವನು. ಆದ್ದರಿಂದ

ಸ್ವರಾಜ್ಯದ ಶ್ರೇಯಸ್ಸನ್ನೂ, ಸರ್ವಸ್ವವನ್ನೂ ವಿಶಾಲ ಜನಸಮುದಾಯದೊಂದಿಗೆ ಹಂಚಿಕೊಳ್ಳಬೇಕು, ಜನಸಮುದಾಯದಲ್ಲಿ ಹರಡಬೇಕು.

ಗಾಂಧೀಜಿ ಮತ್ತು ಗುರುದೇವರು ನಿಜಾರ್ಥದಲ್ಲಿ ದೇಶಾಭಿಮಾನಿಗಳಾಗಿದ್ದರು. ನಿಜವಾದ ದೇಶಾಭಿಮಾನಿಗೆ ತನ್ನತನದ ಅರಿವಿರುತ್ತದೆ. ಆದ್ದರಿಂದ ಅದರ ಪರಿಣಾಮವಾಗಿ ತನ್ನ ಆತ್ಮಗೌರವವನ್ನು ರಕ್ಷಿಸಿಕೊಳ್ಳುವುದು ತನ್ನ ಪರಮೋಚ್ಚ ಹಾಗೂ ಅತ್ಯಂತ ಪವಿತ್ರವಾದ ಕರ್ತವ್ಯವೆಂದು ಅವನು ಭಾವಿಸುತ್ತಾನೆ. ದೇಶಾಭಿಮಾನವೆಂದರೆ ತನ್ನ ದೇಶದ ಆತ್ಮಗೌರವವನ್ನು ಕಾಪಾಡುವುದು. ನಿಜವಾದ ಆತ್ಮಜ್ಞಾನಿಯ ಪರೀಕ್ಷೆ ಮತ್ತು ಗುರುತು ಅವು ತನ್ನ ನೆರೆಹೊರೆಯವನೊಂದಿಗೆ ಹೊಂದಿರುವ ಪ್ರೀತಿ. ಆ ಪ್ರೀತಿ ಅವನು ಸಲ್ಲಿಸುವ ಸೇವೆಯಲ್ಲಿ ಫಲ ಪಡೆಯುತ್ತದೆ. ಆದ್ದರಿಂದ ಭಗವಂತನ ಮೇಲಿನ ಪ್ರೀತಿ ಮತ್ತು ನೆರೆಯವನೊಂದಿಗಿನ ಪ್ರೀತಿ ಪ್ರತಿಯೊಬ್ಬರನ್ನೂ ಬಂಧಿಸುತ್ತದೆ. ಅದೇ ರೀತಿ ಯಾರಾದರೂ ಒಂದು ವೇಳೆ ತಾನು ಅಖಂಡ ಮಾನವಕುಲವನ್ನು ಪ್ರೀತಿಸುವುದಾಗಿ ಹೇಳಿಕೊಂಡರೆ ಅವನು ತನ್ನ ದೇಶಾಭಿಮಾನದ ಸದಿಚ್ಛೆ ಮತ್ತು ಕೃತಿಗಳನ್ನು ದಾಖಲೆಗಳ ಮೂಲಕ ರುಜುವಾತು ಪಡಿಸಬೇಕು. ಉದಾಹರಣೆಗೆ, ಸ್ವದೇಶದ ಸಂಸ್ಕೃತಿಗೂ ಮತ್ತು ಕಲಾತ್ಮಕ ಕೃತಿಗಳಿಗೂ ಮತ್ತು ಕರಕುಶಲ ವಸ್ತುಗಳಿಗೂ ಅವನು ಮನ್ನಣೆ ಕೊಡುತ್ತಾನೆಯೇ? ಗಾಂಧೀಜಿ ಮತ್ತು ಗುರುದೇವರ ದೇಶಾಭಿಮಾನ ಪರಿಶುದ್ಧವಾದುದಾಗಿತ್ತು. ಈ ಪ್ರಕಾರದ ದೇಶಾಭಿಮಾನಕ್ಕೆ ಕಾರಣ ಸ್ಪಷ್ಟವಾಗಿತ್ತು. ಯಾರು ಯಾವ ದೇಶದಲ್ಲಿ ಜನ್ಮ ತಾಳಿರುತ್ತಾರೋ ಅವರ ಧಮನಿಗಳಲ್ಲಿ ಆ ದೇಶದ ವಿಚಾರ ಮತ್ತು ಸಂಸ್ಕೃತಿ ಪ್ರವಹಿಸುತ್ತವೆ. ಅವು ಅವನ ನಂಬಿಕೆಯನ್ನೂ ನಡತೆಯನ್ನೂ ವ್ಯಕ್ತಿ ಮತ್ತು ಸಮಸ್ಯೆಗಳ ಕಡೆಗೆ ಹೋಗುವ ಅವನ ರೀತಿಯನ್ನೂ ರೂಪಿಸುತ್ತವೆ. ಆದ್ದರಿಂದಲೇ ಒಂದು ದೇಶದ ಮೇಲಿನ ಪರದೇಶದ ಆಡಳಿತ ಯಾವಾಗಲೂ ರಾಷ್ಟ್ರೀಯ ಸಂಸ್ಕೃತಿ ಮತ್ತು ರಾಷ್ಟ್ರಾಭಿಮಾನವನ್ನು ಅಭಿವೃದ್ಧಿಪಡಿಸುವಲ್ಲಿ ಬಾಧಕವಾಗಿವೆ. ಆದ್ದರಿಂದ ಗಾಂಧೀಜಿ ಮತ್ತು ಗುರುದೇವ ಇಬ್ಬರೂ ಭಾರತದ ಸ್ವಾಭಿಮಾನದ ಉಳಿಯುವಿಕೆಗೆ ಉಂಟುಮಾಡುವ ಅಪಾಯವನ್ನು ಬಲವಾಗಿ ವಿರೋಧಿಸಿದರು. ಅಂಥ ದೇಶಾಭಿಮಾನ ಸಾಮಾನ್ಯ ದೇಶಾಭಿಮಾನಕ್ಕೂ ಮಿಗಿಲಾದದ್ದು. ಏಕೆಂದರೆ ಕೇವಲ ದೇಶಾಭಿಮಾನವೊಂದೇ ಸಾಲದು.

ಓರ್ವ ಕವಿ ಹೇಳಿದಂತೆ "ಕೇವಲ ಇಂಗ್ಲೆಂಡ್ ಗೊತ್ತಿದ್ದವರಿಗೆ ಇಂಗ್ಲೆಂಡಿನ ಸಮಗ್ರತೆ ಏನು ಗೊತ್ತು?." ಆದ್ದರಿಂದ ಗಾಂಧೀಜಿ ಮತ್ತು ಗುರುದೇವರು ವಿಶ್ವದ ಎಲ್ಲಾ ಮೂಲೆಗಳಿಂದ ಹರಿದು ಬರುವ ಸಂಸ್ಕೃತಿಗಳ ಪ್ರಭಾವ ತಮ್ಮ ಮನಸ್ಸು ಮತ್ತು ಹೃದಯದ ಮೇಲೆ ಉಂಟಾಗಲೆಂದು ಅವುಗಳ ಕವಾಟಗಳನ್ನು ತೆರೆದಿಟ್ಟಿದ್ದರು. ಇದು ಅಂತಿಮವಾಗಿ ಫಲದಾಯಕವಾಗುವ ಮುನ್ನ ತನ್ನ ಸಹದೇಶವಾಸಿಗಳ ಭಾವನೆಗಳೊಂದಿಗೆ ತನ್ನನ್ನು ಏಕೀಭವಿಸಿಕೊಳ್ಳಬೇಕು; ತನ್ನ ದೇಶದ ಚೈತನ್ಯ ಮತ್ತು ಸಂಸ್ಕೃತಿಯ ವೈಶಿಷ್ಟ್ಯವನ್ನು ತನ್ನಲ್ಲಿ ತುಂಬಿಕೊಂಡಂಥವನಾಗಿರಬೇಕು. "ಆಕಾಶದ ಕೆಳಗೆ ಒಂದು ಕುಟುಂಬ" ಎಂಬ ಮಾತು ಕೃತಿಗಿಂತ ಆಡಲು ಸುಲಭ. ಈ ಸತ್ಯದ ಪ್ರಕಾರ ಬದುಕುವವರು ಅತೀ ವಿರಳ. ಆದಾಗ್ಯೂ ನಮ್ಮಲ್ಲಿಯ ಅನೇಕರಿಗೆ ದೇಶಾಭಿಮಾನ ಆಚರಣೆಯ ಅತ್ಯಂತ ವ್ಯವಹಾರಿಕ ನಿಯಮವಾಗಿದೆ.

– ಅನು : ಸು.ಕಾ.

* * *

ರೈತ ಚಳುವಳಿ ಬ್ಯಾಂಕ್ ಕಟ್ಟೆ ಏರಿತು!

– ಸುರೇಂದ್ರ ಕೌಲಗಿ

ಭಾರತದ ವಿವಿಧ ಪ್ರದೇಶಗಳಲ್ಲಿಯಂತೆ ಕರ್ನಾಟಕದಲ್ಲೂ ರೈತರ ಚಳುವಳಿ ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಚಳುವಳಿ ಕೆಲವೊಮ್ಮೆ ಉಗ್ರ ರೂಪ ತಾಳಿದರೆ ಇನ್ನು ಕೆಲವೊಮ್ಮೆ ಸೌಮ್ಯ ರೂಪ ತಾಳಿದೆ. ಕಾವೇರಿಯಲ್ಲಿಯ ಏರಿಳಿತದಂತೆ ಕರ್ನಾಟಕದಲ್ಲಿಯ ರೈತ ಚಳುವಳಿ ಏರಿಳಿತವನ್ನು ಕಂಡಿದೆ.

ಇದುವರೆಗೆ ರೈತ ಚಳುವಳಿಯ ಸ್ಥಾನಗಳಾಗಿ ವಿಧಾನ ಸೌಧ, ಕೆ.ಆರ್.ಎಸ್. ಸಕ್ಕರೆ ಕಾರ್ಖಾನೆಗಳು, ನಿಯಂತ್ರಣ ಮಾರುಕಟ್ಟೆಗಳು, ಕೆ.ಎಫ್.ಸಿ, ಹೆದ್ದಾರಿಗಳು ಇತ್ಯಾದಿಗಳಾಗಿದ್ದವು. ಇತ್ತೀಚೆಗೆ ರೈತ ಚಳುವಳಿ ತನ್ನ ಪ್ರತಿಭಟನೆಯ ಸ್ಥಳವನ್ನಾಗಿ ಹೊಸ ತಾಣವನ್ನು ಪಡೆಯಿತು. ಅದು ವಿದೇಶದ ಐ.ಸಿ.ಐ.ಸಿ.ಐ ಬ್ಯಾಂಕಿನ ಮೈಸೂರು ನಗರ ಶಾಖೆ.

ದೇಶದ ಇದುವರೆಗಿನ ಎಲ್ಲ ಯೋಜನೆಗಳು, ವ್ಯವಸ್ಥೆಗಳು ರೈತನ ಮತ್ತು ಬಡವರ ಪರವಾಗಿಯೇ ಎಂದು ಹೇಳಲಾಗುತ್ತ ಬಂದಿದೆಯಾದರೂ ವಾಸ್ತವವಾಗಿ ಅವೆಲ್ಲವೂ ರೈತರು ಮತ್ತು ಬಡವರಿಗೆ ತ್ರಿಶೂಲ ಸಮನಾಗಿ ಚುಚ್ಚುತ್ತಿವೆ. ೧೯೯೦ ರ ದಶಕದಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಪ್ರಾರಂಭವಾದಾಗಲೂ ಇದೆಲ್ಲವೂ ರೈತನ ಉದ್ಧಾರಕ್ಕಾಗಿಯೇ ಎಂದು ಹೇಳಲಾಗುತ್ತಿತ್ತು. ೧೯೬೦ ರ ದಶಕಗಳಲ್ಲಿ ಹಸಿರುಕ್ರಾಂತಿಯನ್ನು ಹೂಡಿದಾಗ ಅದು ಸಹ ರೈತನ ಉದ್ಧಾರಕ್ಕೆಂದು ಹೇಳಲಾಗಿತು. ಆದರೆ ವಾಸ್ತವ ಸಂಗತಿ ಏನು? ಪ್ರತಿ ಐದು ನಿಮಿಷಗಳಿಗೊಮ್ಮೆ ರೈತನ ಆತ್ಮಹತ್ಯೆ! ರೈತನ ಆತ್ಮಹತ್ಯೆ ಪ್ರಕರಣಗಳಲ್ಲಿ ಬ್ಯಾಂಕುಗಳ ಪಾತ್ರ ದೊಡ್ಡದಾಗಿಯೇ ಇದೆ. ಆದರೆ ಆಶ್ಚರ್ಯದ ಸಂಗತಿಯೇನೆಂದರೆ ಆತ್ಮಹತ್ಯೆಗೆ ಬ್ಯಾಂಕುಗಳು ಕಾರಣವಾಗುತಿವೆಯೆಂಬ ಅಭಿಪ್ರಾಯಕ್ಕೆ ಸರ್ಕಾರ ಬರದೇ ಇರುವುದು! ಪ್ರತಿಯೊಂದು ಆತ್ಮಹತ್ಯೆಗೆ ರೈತನೇ ಸ್ವಯಂ ಕಾರಣ ಎಂದೇ ಬಿಂಬಿಸಲಾಯಿತೆ ಹೊರತು ಬ್ಯಾಂಕುಗಳು ಹೇಗೆ ರೈತರನ್ನೂ, ಬಡವರನ್ನೂ ತನ್ನ ನಿಯಮಾವಳಿಗಳ ಬಲೆಯಲ್ಲಿ ಸಿಕ್ಕಿಸಿ ತಮ್ಮ ಸುರಕ್ಷತೆಯನ್ನು ಕಾಪಾಡಿಕೊಂಡು ಬಂದಿವೆಯೆಂಬುದನ್ನು ತಿಳಿಸುವ ಪ್ರಯತ್ನ ನಡೆಯಲೇ ಇಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಬ್ಯಾಂಕ್ ನೌಕರರ ಜೀವನ ಮಟ್ಟಕ್ಕೂ, ರೈತರ ಜೀವನ ಮಟ್ಟಕ್ಕೂ ಮಧ್ಯೆ ಇದ್ದ ಮತ್ತು ಈಗಲೂ ಇರುವ ಮಹದಂತರದ ಕಾರಣದಿಂದಾಗಿ ಬ್ಯಾಂಕರುಗಳಿಗೆ ರೈತರ ಮತ್ತು ಬಡವರ ನಿಜವಾದ ಕಷ್ಟಗಳನ್ನೂ, ತೊಂದರೆಗಳನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನಮ್ಮ ದೇಶದ ರಾಷ್ಟ್ರೀಕೃತ ಬ್ಯಾಂಕಿನ ಓರ್ವ ಕೆಲಸಗಾರನ ಒಂದು ದಿನದ ವೇತನ ಕನಿಷ್ಠ ಒಂದರಿಂದ ಒಂದೂವರೆ ಸಾವಿರ ರೂಪಾಯಿ ಇದ್ದರೆ, ಅವು ಸಾಲ ಕೊಡುವ ರೈತನ ಅಥವಾ ಇತರ ಗ್ರಾಮೀಣ ಉದ್ಯೋಗದಲ್ಲಿ ತೊಡಗಿರುವ ಕೆಲಸಗಾರನ ಒಂದು ದಿನದ ಸರಾಸರಿ ಆದಾಯ ಒಂದು ನೂರು ರೂಪಾಯಿ. ಅಂದರೆ ಸಾಲ ಕೊಡುವವನು ದಂತ ಗೋಪುರದಲ್ಲಿದ್ದರೆ, ಸಾಲ ಪಡೆಯುವವನು ಮುರುಕಲು ಗುಡಿಸಲಿನಲ್ಲಿದ್ದಾನೆ. ಸಾಲ ಕೊಡುವವನಿಗೆ ಇಂದಿನ ಅಥವಾ ನಾಳಿನ ಚಿಂತೆಯಿಲ್ಲ. ಆದರೆ ಸಾಲ ಪಡೆಯುವವನು ಚಿಂತೆಯೆಂಬ ಚಿತೆಯ ಮೇಲೆಯೇ ಮಲಗಿದ್ದಾನೆ. ಆದ್ದರಿಂದ ಬ್ಯಾಂಕುಗಳು ಅಥವಾ ಅರ್ಥನೀತಿ ತಜ್ಞರು ಅನಿಯಮಿತ, ಅನಿಶ್ಚಿತ, ಅತಂತ್ರ ಆದಾಯದ ರೈತನ ಅಥವಾ ಕಾರ್ಮಿಕನ ಬವಣೆಯನ್ನು ಎಂದೂ ಅರಿಯಲು ಸಾಧ್ಯವಿಲ್ಲ. ಏಕೆಂದರೆ ಯಾವುದೇ ಒಂದು ವಿಷಯದ ನಿಜವಾದ ಅರಿವಾಗಬೇಕಾದರೆ ಆ ವಿಷಯದಲ್ಲಿ ಅನುಭವ ದೊರೆಯಬೇಕು. ಹೀಗೆ ಅನುಭವ ದೊರೆಯುವ ಅವಕಾಶ ದಂತಗೋಪುರದಲ್ಲಿರುವವರಿಗೆ ದೊರೆಯಲು ಸಾಧ್ಯವೇ ಇಲ್ಲ.

ಆದ್ದರಿಂದ ಬ್ಯಾಂಕುಗಳು ಗ್ರಾಹಕರಿಗೆ ಸಾಲ ಕೊಡುವಾಗ ಹಾಕುವ ನಿಯಮಗಳು ಬ್ಯಾಂಕ್ ಪರವಾಗಿ ಇರುತವೆಯೇ ಹೊರತು ಗ್ರಾಹಕರ ಪರವಾಗಿ ಇರುವುದಿಲ್ಲ. ಆದ್ದರಿಂದ "ಸಾಲ ಕೊಟ್ಟವನು ವೀರಭದ್ರ, ಸಾಲ ತೆಗೆದುಕೊಂಡವನು ಕೋಡಂಗಿ" ಎಂಬಂತಾಗುತ್ತದೆ. ಸಮಾಜವು ಸಹ ಹಾಗೆಯೇ ನಡೆದುಕೊಳ್ಳುತ್ತದೆ. ಹಳ್ಳದಲ್ಲಿ ಬಿದ್ದವನಿಗೇ ನೂರೆಂಟು ಏಟು. ಅವನಿಗೆ ಸಮಾಜದ ಸಹಾನುಭೂತಿ ಇರುವುದಿಲ್ಲ. ತಾತ್ಕಾಲಿಕವಾಗಿ ಬಡ್ಡಿ ರಹಿತ ಧನ ಸಹಾಯ ದೊರೆಯುವ ವ್ಯವಸ್ಥೆಯೂ ಸಮಾಜದಲ್ಲಿ ಇರುವುದಿಲ್ಲ. ಉಳ್ಳವನಿಗೆ ನೂರೆಂಟು ದಾರಿ; ಇಲ್ಲದವಗೆ ಆತ್ಮಹತ್ಯೆಯ ದಾರಿ.

ಇತೀಚಿಗೆ ಜಾಗತೀಕರಣದ ಕಾರಣದಿಂದಾಗಿ ದೇಶದಲ್ಲಿ ಬಂದಿರುವ ವಿದೇಶಿ ಬ್ಯಾಂಕುಗಳ ಹಾವಳಿ ಹೇಳ ತೀರದಾಗಿದೆ. ಹಿಂದಿನ ಕಾಲದಲ್ಲಿ ಭಾರತೀಯ ಬ್ಯಾಂಕುಗಳು ಸಾಲದ ವಸೂಲಾತಿಗಾಗಿ ಕಾನೂನಿನ ಕ್ರಮಗಳನ್ನು ಮಾತ್ರ ಕೈಗೊಳ್ಳುತ್ತಿದ್ದವು. ಈಗ ಕಾಲ ಬದಲಾಗಿದೆ. ಬ್ಯಾಂಕುಗಳು ಗೂಂಡಾಗಳನ್ನು ನಿಯಮಿಸಿಕೊಳ್ಳುತ್ತವೆ. ಜೊತೆಗೆ ಕಾನೂನಿನ ಸಮರವನ್ನೂ ಸಾರುತವೆ. ಸಾಲ ಪಡೆದ ರೈತ ಜೂಜಾಟದಂತಿರುವ ತನ್ನ ಕೃಷಿ ಆದಾಯದಿಂದ ಸಾಲ ತೀರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ವ್ಯಕ್ತಿ ನಿಕೃಷ್ಟ ಇರಬಹುದು ಆದರೆ ಸ್ವಾಭಿಮಾನವಿಲ್ಲದ ವ್ಯಕ್ತಿ ಇರಲಾರ. ಆದ್ದರಿಂದ ದೇಶಕ್ಕೆ ಅನ್ನ ಕೊಡುವ ರೈತನಲ್ಲಿ ಸ್ವಾಭಿಮಾನವಿಲ್ಲದೆ ಇರಲು ಸಾಧ್ಯವೇ ಇಲ್ಲ ಅವನ ಮೇಲೆ ಎರಗುವ ಬ್ಯಾಂಕಿನ ಗೂಂಡಾಗಳ ಕಾಟ ಹಾಗೂ ಕಾನೂನಿನ ಬೀಸು ದೊಣ್ಣೆಯನ್ನು ಎದುರಿಸಲಾರದೆ ತತ್ತರಿಸಿ ಹೋಗುತ್ತಾನೆ; ಆತ್ಮಹತ್ಯೆಗೆ ಶರಣಾಗುತ್ತಾನೆ.

ಇಂಥ ಒಂದು ದುರ್ಘಟನೆ ನಂಜನಗೂಡು ತಾಲ್ಲೂಕಿನ ಹೊಸಪುರ ಗ್ರಾಮದ ಎಚ್.ಎಂ.ಮಂಜುನಾಥ ಎಂಬ ಮೂವತ್ತಾರು ವರ್ಷದ ರೈತನೊಬ್ಬ ಐ.ಸಿ.ಐ.ಸಿ.ಐ. ಬ್ಯಾಂಕಿನಿಂದ ಸಾಲ ಪಡೆದು ಟ್ರ್ಯಾಕ್ಟರ್ ಖರೀದಿಸಿದ್ದರು. ಸಾಲದ ಮೊತ್ತ ೪.೭೯ ಲಕ್ಷ. ಇದರಲ್ಲಿ ಮೊದಲ ಕಂತಾಗಿ ೪೮ ಸಾವಿರ ರೂಪಾಯಿಗಳನ್ನು ಹಿಂದಿರುಗಿಸಿದ್ದರು. ಉಳಿದ ಸಾಲವನ್ನು ಹಿಂದಿರುಗಿಸುವ ಪ್ರಯತ್ನದಲ್ಲಿದ್ದರು. ಸಾಲ ಹಿಂದಿರುಗಿಸುವಲ್ಲಿ ಮಂಜುನಾಥರವರ ಪ್ರಾಮಾಣಿಕ ಪ್ರಯತ್ನವಿದೆಯೇ ಇಲ್ಲವೇ, ಅವರು ಪ್ರಾಮಾಣಿಕರಾಗಿದ್ದರೂ ಅವರಿಗೆ ಸಾಲ ತೀರಿಸುವಲ್ಲಿರುವ ವ್ಯವಹಾರಿಕ ತೊಂದರೆಗಳೇನು ಎಂಬ ವಾಸವ ಸಂಗತಿಗಳನ್ನು ತಿಳಿಯುವ ಪ್ರಯತ್ನ ಮಾಡದೆ ಆ ವಿದೇಶಿ ಬ್ಯಾಂಕು ಒಂದಾದ ಮೇಲೆ ಒಂದು ನೋಟೀಸನ್ನು ಕೊಟ್ಟು, ಬಾಡಿಗೆ ವಸೂಲಿದಾರರನ್ನು ಛೂ ಬಿಟ್ಟು, ಮಧ್ಯ ದಾರಿಯಲ್ಲಿ ಟ್ರ್ಯಾಕ್ಟರ್ ಕಿತುಕೊಂಡು ಹೋಗಿರುವುದು ದುಷ್ಟತನದ ಪರಮಾವಧಿ. ಸಾಲ ಕೊಡುವಾಗ ಮಿತ್ರನಂತೆ ವರ್ತಿಸಿದ ಬ್ಯಾಂಕು, ಅದನ್ನು ವಾಪಸ್ ಪಡೆಯುವಾಗ ಶತ್ರುವಿನಂತೆ ವರ್ತಿಸಿದ್ದು ಬ್ಯಾಂಕಿಂಗ್ ವ್ಯವಹಾರಕ್ಕೆ ಶೋಭೆ ತರುವಂಥದ್ದಲ್ಲ. ಇಂದಿನ ಅಭಿವೃದ್ಧಿ ನೀತಿಗೆ ವಿರೋಧವಾದುದು. ಒಂದು ಕಡೆ ರಿಸರ್ವ್ ಬ್ಯಾಂಕು ಎಲ್ಲ ಬ್ಯಾಂಕುಗಳಿಗೆ ತಮ್ಮಲ್ಲಿ ಸಂಗ್ರಹಿತವಾಗಿರುವ ಹಣದ ಮೊತದಲ್ಲಿ ಶೇಕಡಾ ಇಂತಿಷ್ಟು ಪ್ರಮಾಣದಲ್ಲಿ ಜನರಿಗೆ, ರೈತರಿಗೆ, ಚಿಕ್ಕ ಉದ್ಯೋಗಗಳಲ್ಲಿ ತೊಡಗಿರುವವರಿಗೆ ಸಾಲದ ರೂಪದಲ್ಲಿ ಸಹಾಯ ಮಾಡಿ ಅವರೆಲ್ಲರೂ ದೇಶದ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಸೇರುವಂತೆ ಮಾಡಬೇಕೆಂದು ಸೂಚನೆ ಕೊಡುವುದರ ಮೂಲಕ ಬ್ಯಾಂಕುಗಳಲ್ಲಿ ಸ್ಪರ್ಧೆಗೆ ಕುಮ್ಮಕ್ಕನ್ನು ಕೊಡುತ್ತದೆ. ಈ ರೀತಿ ಜನತಾ ಸಾಲವನ್ನು ಕೊಡುವುದರ ಆಧಾರದ ಮೇಲೆ ಯಾವುದೇ ಒಂದು ಬ್ಯಾಂಕು ಎಷ್ಟು ಜನಪರ ಆಗಿವೆಯೆಂದು ರಿಸ ರ್ವ್ ಬ್ಯಾಂಕ್ ಪರಿಶೀಲಿಸುತ್ತದೆ. ಅಲ್ಲದೆ, ಸ್ವತಃ ಪ್ರತಿಯೊಂದು ಬ್ಯಾಂಕೂ ತನ್ನ ಜಾಹೀರಾತುಗಳಲ್ಲಿ ತನ್ನ ಈ ಸಮಾಜಮುಖಿ ಪಾತ್ರವನ್ನು ಎತ್ತಿ ತೋರಿಸುತ್ತದೆ. ಇನ್ನೊಂದು ಕಡೆ ಸಾಲ ಪಡೆದವರನ್ನು ಶತ್ರುಗಳೆಂದು ಭಾವಿಸುತ್ತಾ ಅವರ ಸ್ವಾಭಿಮಾನಕ್ಕೆ ಅಂದರೆ ಒಂದು ರೀತಿಯಲ್ಲಿ ಅವರ ಮರ್ಮಾಂಗಕ್ಕೇ ಏಟು ಕೊಡುವುದರ ಮೂಲಕ ಅವರು ಬೇರೆ ಗತಿಯಿಲ್ಲದೆ ಆತ್ಮಹತ್ಯೆಗೆ ಶರಣಾಗುವಂತೆ ಮಾಡುತ್ತದೆ.

ಮಂಜುನಾಥರವರ ಆತ್ಮಹತ್ಯೆಯ ಹಿಂದೆ ಇರುವ ಸರ್ಕಾರದ ಇಂದಿನ ಕಾರಾಳ ಅಭಿವೃದ್ಧಿ ನೀತಿ, ಟ್ರ್ಯಾಕ್ಟರ್‌ನಂಥ ಯಂತ್ರಗಳನ್ನು ತಯಾರಿಸುವ ಉದ್ಯಮಿಗಳ ಲಾಭಕೋರತನದ ಅಮಾನವೀಯ ನೀತಿ ಸ್ಪಷ್ಟವಾಗಿ ಗೋಚರಿಸುತದೆ.

ಐ.ಸಿ.ಐ.ಸಿ.ಐ ಬ್ಯಾಂಕಿನೊಳಗೆ ರೈತ ಸಂಘ ತನ್ನ ಚಳುವಳಿಯನ್ನೆ ತೆಗೆದುಕೊಂಡು ಹೋಗಿ ಬ್ಯಾಂಕಿಂಗ್ ಉದ್ಯಮದಲ್ಲಿಯ ಉನ್ನತ ನೀತಿರೂಪಕರಿಗೆ ಕಿವಿ ಹಿಂಡಿ ಅವರನ್ನು ಎಚ್ಚರಿಸಿದೆ. ಅರ್ಥ ಮಂತ್ರಿ ಚಿದಂಬರಂ ಕೂಡ ಬ್ಯಾಂಕುಗಳು ಸಾಲ ವಸೂಲಾತಿಗಾಗಿ ತನ್ನ ಸಿಬ್ಬಂದಿಯನ್ನಲ್ಲದೆ ಬೇರೆ ಬಾಡಿಗೆ ವಸೂಲಿದಾರರನ್ನು ಉಪಯೋಗಿಸಬಾರದೆಂದೂ, ಹಾಗೆ ಮಾಡಿದಲ್ಲಿ ಅಂಥ ಬ್ಯಾಂಕುಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿಯೂ ಹೇಳಿದ್ದಾರೆ ಮತ್ತು ಈ ಸಂಬಂಧ ಒಂದು ವಿಧೇಯಕವನ್ನು ಲೋಕಸಭೆಯಲ್ಲಿ ಮಂಡಿಸುವುದಾಗಿ ಹೇಳಿದ್ದಾರೆ. ಚಿದಂಬರಂರವರು ದಿಲ್ಲಿಯಲ್ಲಿ ಬ್ಯಾಂಕುಗಳಿಗೆ ಬಾರಿಸಿದ ಎಚ್ಚರಿಕೆಯ ಗಂಟೆಯ ಈ ಧ್ವನಿ ಬ್ಯಾಂಕ್ ಆಡಳಿತಗಾರರಿಗೆ ಕೇಳಿಸುವುದು ಯಾವಾಗಲೋ?

ಮಂಜುನಾಥರ ಆತ್ಮಹತ್ಯೆಯ ಪ್ರಕರಣಕ್ಕೆ ಇನ್ನೊಂದು ಮುಖ ಸಹ ಇದೆ. ನಮ್ಮ ರೈತರು ಯಾವುದೇ ಬ್ಯಾಂಕಿನಿಂದ ಸಾಲ ಪಡೆಯುವಾಗ ತಮ್ಮ ಇತಿಮಿತಿಯನ್ನು ತಿಳಿದುಕೊಂಡಿರಬೇಕು. ಸಾಲ ಸಿಗುತ್ತದೆಂಬ ಮಾತ್ರಕ್ಕೇ ಯಾವುದೋ ಯೋಜನೆ ಹಾಕಿಕೊಂಡು ಹೋಗುವುದು ತಪ್ಪು. "ಸಾಲವನು ಕೊಂಬಾಗ . . . . . ಎಂಬ ಸರ್ವಜ್ಞನ ವಚನವನ್ನು ನಮ್ಮ ರೈತರು ಸದಾ ನೆನಪಿನಲ್ಲಿಟ್ಟುಕೊಂಡಿರಬೇಕು.

ರೈತ ಚಳುವಳಿಯ ಹೊಣೆಗಾರಿಕೆ ದ್ವಿಮುಖವಾಗಿದೆ. ಒಂದು, ಸಾಲ ಕೊಟ್ಟು ಅಮಾನವೀಯವಾಗಿ ವರ್ತಿಸುವ ಬ್ಯಾಂಕ್ ವರಿಷ್ಠರಿಗೆ ಇಂದಿನ ಜೀವನದ ನಗ್ನ ಸತ್ಯಗಳ ಪರಿಚಯ ಮಾಡಿಕೊಡುವುದು. ಇನ್ನೊಂದು, ಸಾಲ ಮತ್ತು ಅಭಿವೃದ್ಧಿ ಮತ್ತು ಸಾಲ ಎಂಬ ಈ ವಿಷ ಚಕ್ರದಲ್ಲಿ ಸಿಕ್ಕಿಹಾಕಿಕೊಳ್ಳದೆ ಗೌರವಯುತ ಹಾಗೂ ತೃಪ್ತಿಕರ ಜೀವನವನ್ನು ನಡೆಸುವಂತೆ ರೈತರಿಗೆ ತಿಳಿಸುವುದು.

ರೈತ ಚಳುವಳಿ ಬ್ಯಾಂಕುಗಳಿಗೆ ಬೀಗ, ರೈತರ ಆತ್ಮಹತ್ಯೆ ಇತ್ಯಾದಿ ಘಟನೆಗಳನ್ನು ವಿಶ್ಲೇಷಿಸುವಾಗ ಈ ಎಲ್ಲ ಸಮಸ್ಯೆಗಳಿಗೆ ರೈತರಲ್ಲಿ ತಮ್ಮದೇ ಆದ ಪರಿಹಾರವಿಲ್ಲವೆ ಎಂಬ ಪ್ರಶ್ನೆ ಹುಟ್ಟುತ್ತದೆ. ಈ ಪ್ರಶ್ನೆಗೆ ಉತ್ತರ ಹುಡುಕುವ ಕೆಲಸವನ್ನು ರೈತ ಚಳುವಳಿ ಮಾಡಬೇಕಿದೆ.

ರೈತರ ಸಮಸ್ಯೆಗಳು ನೂರಾರು. ಯಾವ ಸರ್ಕಾರವೂ, ಯಾವ ಪಂಚವಾರ್ಷಿಕ ಯೋಜನೆಯೂ ರೈತರ ಸಮಸ್ಯೆಗಳನ್ನು ಬಗೆಹರಿಸಲಾರವು. ಅಷ್ಟೇ ಅಲ್ಲ, ಅವು ರೈತರ ಸಮಸ್ಯೆಗಳನ್ನು ಇನ್ನಷ್ಟು ಕ್ಲಿಷ್ಟಗೊಳಿಸುತ್ತ ಹೋಗುತವೆ. ರೈತನೆಂದರೆ ಕೃಷಿಕ. ಅವನ ಸಂಬಂಧ ಭೂಮಿಯೊಂದಿಗೆ. ಭೂಮಿಯ ಸೇವೆಗೆ ಇರುವುದು ಗ್ರಾಮ. ಗ್ರಾಮ ಜೀವನದೊಂದಿಗೆ ರೈತನ ಜೀವನ ಬೆರೆತುಕೊಂಡಿದೆ. ಗ್ರಾಮಕ್ಕೂ, ರೈತನಿಗೂ ಕರುಳಬಳ್ಳಿಯ ಸಂಬಂಧವಿದೆ. ಆದ್ದರಿಂದ ರೈತನ ಸಮಸ್ಯೆಗಳು ಸಮಾಧಾನಕರವಾಗಿ ಪರಿಹಾರಗೊಳ್ಳಬೇಕಾದರೆ ಅದು ಗ್ರಾಮ ವ್ಯವಸ್ಥೆಯ ಮೂಲಕವೇ. ರೈತನ ಜೀವನದ ಭದ್ರತೆ ಗ್ರಾಮ ಜೀವನದ ಭದ್ರತೆಯೊಂದಿಗೆ ಹಾಸುಹೊಕ್ಕಾಗಿದೆ. ಆದ್ದರಿಂದ ರೈತನಿಗೆ ಅವನ ಕಷ್ಟಗಳಿಂದ ಮುಕ್ತಿ ಸಿಗಬೇಕಾದರೆ ಮತ್ತು ಅವನು ಐ.ಸಿ.ಐ.ಸಿ.ಐ.ನಂಥ ಬ್ಯಾಂಕುಗಳ ಜೇಡರ ಬಲೆಯಿಂದ ದೂರವಿರಬೇಕಾದರೆ ಅವನಿಗೆ ಒಟ್ಟಾರೆಯಾಗಿ ಜೀವನದ ಭದ್ರತೆ ದೊರೆಯಬೇಕು. ಹಾಗಾಗಬೇಕಾದರೆ ರೈತ ವಾಸಿಸುವ ಅವನ ಭೂಮಿ ಗ್ರಾಮದಾನದ ಮೂಲಕ ಗ್ರಾಮದ ಒಡೆತನಕ್ಕೆ ಸೇರಿಕೊಳ್ಳಬೇಕು. ನಂತರ ಇಡೀ ಗ್ರಾಮ ತನ್ನ ವ್ಯಾಪ್ತಿಯಲ್ಲಿರುವ ರೈತರ ಯೋಗಕ್ಷೇಮ ನೋಡಿಕೊಳ್ಳಬೇಕು. ಬ್ಯಾಂಕ್ ಮೆಟ್ಟಿಲೇರಿದ ರೈತ ಚಳುವಳಿ ಗ್ರಾಮದ ಕಡೆಗೆ ನಿಷ್ಠೆಯಿಂದ ಹೆಜ್ಜೆ ಇಡಲಿ. ಈ ಕ್ರಮದಲ್ಲಿಯೇ ರೈತನ ಹಾಗೂ ರೈತ ಚಳುವಳಿಯ ಯಶಸ್ಸಿನ ಗುಟ್ಟು ಇದೆ.

* * *

ಬ್ರಹ್ಮರ್ಷಿ, ರಾಜರ್ಷಿ ಮತ್ತು ದೇವರ್ಷಿಗಳ ಪರಿಚಯ

– ವಿನೋಬಾ

ಆಕಾಶದ ಅವಕಾಶದಲ್ಲಿ ಅಸಂಖ್ಯ ನಕ್ಷತ್ರಗಳು ತುಂಬಿಬಿಟ್ಟಿವೆ. ದೂರದರ್ಶಕವಿಲ್ಲದೆ ಬರಿಗಣ್ಣಿಂದ ಆ ಎಲ್ಲವುಗಳ ದರ್ಶನವಾಗಲಾರದು. ದೂರದರ್ಶಕದಿಂದಲೂ ಕೂಡ ಎಲ್ಲವುಗಳ ದರ್ಶನವಾಗುವುದೇ ಇಲ್ಲ. ಆದರೆ ಬರೀಗಣ್ಣಿಂದ ಮಿನುಗುವಂಥ ಕೆಲವು ಸೂಕ್ಷ್ಮ ನಕ್ಷತ್ರಗಳ ದರ್ಶನವಾಗುತ್ತದೆ. ಜೀವನವು ಕೂಡ ಆಕಾಶದಂತೆ ಟೊಳ್ಳಾಗಿರುವಂತೆನಿಸುತ್ತದೆ. ಆದರೆ ಟೊಳ್ಳಾಗಿರುವಂತೆನಿಸುವ ಈ ಜೀವನ ಅನಂತ ಗಟ್ಟಿ ಸಿದ್ಧಾಂತಗಳಿಂದ ತುಂಬಿದೆ. ಕೇವಲ ಬುದ್ಧಿಯ ಮೂಲಕ ಅವುಗಳಲ್ಲಿಯ ಬಹು ಕಡಿಮೆ ಸಿದ್ಧಾಂತಗಳನ್ನು ಗ್ರಹಿಸಬಹುದಾಗಿದೆ. ಆದರೆ ತಪಸ್ಸಿನ ದೂರದರ್ಶಕದ ಮೂಲಕ ನೋಡಿದಲ್ಲಿ ಸೂಕ್ಷ್ಮ ಸಿದ್ಧಾಂತಗಳು ಪ್ರಕಟಗೊಳ್ಳಲು ಪ್ರಾರಂಭಿಸುತ್ತವೆ. ಈ ರೀತಿಯಾಗಿ ಯಾವುದೇ ಹೊಸ ಸಿದ್ಧಾಂತ ಅಥವಾ ತತ್ವವನ್ನು ನೋಡಲು ಸಾಧ್ಯವಾದಲ್ಲಿ ಅವನಿಗೆ ಮಂತ್ರದರ್ಶನವಾಯಿತೆಂದು ಹೇಳಬಹುದು. ಅಂಥವನನ್ನೇ ಋಷಿ ಎಂದು ಹೇಳುತ್ತೇವೆ. ಋಷಿ ಶಬ್ದದ ಮೂಲ ಅರ್ಥ 'ಮಂತ್ರ ದ್ರಷ್ಟಾ'– ಮಂತ್ರವನ್ನು ನೋಡುವವ. ಋಷಿ ಕೇವಲ ಮಂತ್ರದ್ರಷ್ಟರೇ ಆಗಿದ್ದರು, ಮಂತ್ರಗಳ ಪ್ರವರ್ತಕರಾಗಿರಲಿಲ್ಲ.

ಋಷಿರ್ ದರ್ಶನಾತ್– ಯಾರಿಗೆ ದರ್ಶನವಾಗಿದಿಯೊ ಅವನು ಋಷಿ, ವಿಶಿಷ್ಟ ದೃಷ್ಟಿಯನ್ನು ಇಟ್ಟುಕೊಳ್ಳುವವ, ನಿಷ್ಠಾವಾನ್ ಆದ ಪುರುಷ. ಋಷಿಗಳಿಗೆ ದರ್ಶನವಾಗುವಂಥದು ಹೊಸ ಅರ್ಥಗಳು ಹೊರಡಲು ಸಾಧ್ಯ. ಬೀಜದಲ್ಲಿ ಏನೆಲ್ಲ ಇರುವುದಿಲ್ಲ? ಬೀಜದ ವಿಕಾಸವಾಗುತ್ತದೆ. ಹಸಿರು ತುಂಬಿದ ಎಲೆ, ರೆಂಬೆ ಇತ್ಯಾದಿ ಎಲ್ಲವೂ ಬೀಜದಲ್ಲಿರುತ್ತದೆ. ಹೊರಗಡೆಯಿಂದ ಕೇವಲ ನೋಡುವುದರಿಂದ ಗೊತ್ತಾಗುವುದಿಲ್ಲ. ಮಾವಿನ ಹಣ್ಣಿನ ಓಟೆಯನ್ನು ನೋಡುವುದರಿಂದ ಅದರಲ್ಲಿ ಲಕ್ಷಾವಧಿ ಸಿಹಿ ಹಣ್ಣುಗಳು ಹುಟ್ಟುತ್ತವೆಯೆಂದು ಗೊತ್ತಾಗುವುದಿಲ್ಲ.

ಋಗ್ವೇದದಲ್ಲಿ ಸುಮಾರು ಮುನ್ನೂರು ಋಷಿಗಳ ಹೆಸರು ಬರುತ್ತವೆ. ಆ ಹೆಸರುಗಳು ನಮಗೆ ಗೊತ್ತಿಲ್ಲ ಕೂಡ ಮತ್ತು ಹೆಸರಲ್ಲದೆ ಬೇರೆ ಇನ್ನಾವ ಮಾಹಿತಿಯೂ ಅವರ ಸಂಬಂಧವಾಗಿ ದೊರೆಯುವುದಿಲ್ಲ. ಋಷಿಗಳು ತರ್ಪಣ ಮಾಡಲು ಕುಳಿತುಕೊಳ್ಳುವಾಗ ಆಗ 'ವಶಿಷ್ಟಂ ತರ್ಪಯಾಮಿ,' 'ವಿಶ್ವಾಮಿತ್ರಂ ತರ್ಪಯಾಮಿ' ಮತ್ತು ಕೊನೆಯಲ್ಲಿ 'ಸರ್ವಾನ್ ಋಷಿನ್ ತರ್ಪಯಾಮಿ' ಎಂದು ಹೇಳುತ್ತಾರೆ.

ಋಷಿಗಳು ಮೂರು ವಿಶೇಷ ಪ್ರಕಾರದವರಾಗಿದ್ದಾರೆ. ಬ್ರಹ್ಮರ್ಷಿ, ರಾಜರ್ಷಿ ಮತ್ತು ದೇವರ್ಷಿ. ಮೂವರೂ ಮಹಾನ್‌ರಾಗಿದ್ದಾರೆ. ಆದ್ದರಿಂದಲೆ ಅವರನ್ನು

ಮಹರ್ಷಿ ಎಂದು ಕರೆಯುತ್ತಾರೆ. ಮಹರ್ಷಿ ಎಂಬುದು ಸಾಮಾನ್ಯ ಸಂಜ್ಞೆ.

ಆತ್ಮದ ಆಳಕ್ಕೆ ಹೋಗಿ ವಿಶ್ವದ ಸೂಕ್ಷ್ಮತೆಯಲ್ಲಿ ಪ್ರವೇಶ ಮಾಡಿ ಜೀವನದ ಸಿದ್ಧಾಂತಗಳನ್ನು ಶೋಧಿಸುವಂಥ ಶಕ್ತಿ ಚಿಂತನದ್ವಾಗಿರುತ್ತದೆ. ಈ ಚಿಂತನಶಕ್ತಿಯ ಅಭಾವವಿದ್ದಲ್ಲಿ ಸಮಾಜ ಕುಂಟನಾಗಿ ಬಿಡುತ್ತದೆ, ಪ್ರಗತಿ ನಿಂತು ಬಿಡುತ್ತದೆ. ಭೌತಿಕ, ವೈಜ್ಞಾನಿಕ ಸಂಶೋಧನೆಗಳಿಗಾಗಿ ಯಾವ ಪ್ರಕಾರದ ಏಕಾಂತಚಿಂತನದ ಆವಶ್ಯಕತೆಯಿರುತ್ತದೊ ಅದೇ ಪ್ರಕಾರ ಮನೋವೈಜ್ಞಾನಿಕ ಸಂಶೋಧನೆಗಾಗಿ ಕೂಡ ಏಕಾಂತ ಸೇವನೆ ಮಾಡಬೇಕಾಗುತ್ತದೆ. ಇಂಥ ಏಕಾಂತದಿಂದ ಯಾರು ಬ್ರಹ್ಮರ್ಷಿ ಆಗುತ್ತಾರೊ ಅವರು ಸಂಸಾರಿಕ ಜೀವನದ ತತ್ವಜ್ಞಾನದ ಚಿಂತನಾತ್ಮಕ ಸಾರವನ್ನು ಕೊಡುತ್ತಾರೆ. ಅದರಲ್ಲಿ ಜೀವನದ ಸಮಸ್ಯೆಗಳಿಗೆ ಪರಿಹಾರವಿರುತ್ತದೆ.

ಬ್ರಹ್ಮರ್ಷಿ ಎಂದರೆ ಜ್ಞಾನಯೋಗಿ, ಜ್ಞಾನಮಾರ್ಗಿದ್ರಷ್ಟಾ, ಚಾತುರ್ವರ್ಣದ ಭಾಷೆಯಲ್ಲಿ ಬ್ರಾಹ್ಮಣ! ಬ್ರಹ್ಮರ್ಷಿ ತತ್ವಜ್ಞಾನಿಯಾಗಿದ್ದಾನೆ. ಬ್ರಹ್ಮಚಿಂತನೆ ಮಾಡುತ್ತಾನೆ. ಬ್ರಹ್ಮನನ್ನು ಹುಡುಕುತ್ತಾನೆ. ಹೊಸ ಹೊಸ ಸಿದ್ಧಾಂತಗಳನ್ನು ಹೊರಡಿಸುತ್ತಾನೆ ಮತ್ತು ಜನರ ಎದುರು ಇಡುತ್ತಾನೆ. ಯಾವ ರೀತಿ ಪ್ರಯೋಗಶಾಲೆಯಲ್ಲಿ ವಿಜ್ಞಾನದ ಶಕ್ತಿಯ ಅನುಸಂಧಾನ ಮಡುವುದಕ್ಕಾಗಿ ವಿಜ್ಞಾನಿಯ ಅಗತ್ಯವಿರುತ್ತದೆಯೋ ಹಾಗೆಯೇ ಆಧ್ಯಾತ್ಮಿಕ ಶಕ್ತಿಯ ಅನುಸಂಧಾನ ಮಾಡುವುದಕ್ಕಾಗಿ ಬ್ರಹ್ಮರ್ಷಿಯ ಅಗತ್ಯವಿರುತ್ತದೆ. ಯಾವುದರಿಂದ ಸಾಮಾಜಿಕ ಜೀವನ ಮುಂದುವರಿಯಬಲ್ಲದೊ ಅಂಥ ಮೂಲತತ್ವದ ಶೋಧನೆಗಾಗಿ ಸಮಾಜ ಹಿತಾರ್ಥಕ್ಕಾಗಿ ಒಮ್ಮೊಮ್ಮೆ ಬ್ರಹ್ಮರ್ಷಿಗಳು ಸಮಾಜದಿಂದ ದೂರದೂರವಾದ ಆಶ್ರಮಗಳಲ್ಲಿರುತ್ತಾರೆ. ಬ್ರಹ್ಮರ್ಷಿಯ ಕೆಲಸ ಶಾಸ್ತ್ರವನ್ನು ವಿಕಾಸಗೊಳಿಸುವುದು. ವೈಜ್ಞಾನಿಕ ಶೋಧನೆಯಲ್ಲಿಯಂತೆಯೆ ಬ್ರಹ್ಮರ್ಷಿಗಳ ಶೋಧನೆಯ ಉಪಯೋಗ ಇಂದು ಅಥವಾ ನಾಳೆ ಸಮಾಜಕ್ಕಾಗುತ್ತದೆ. ಪ್ರಾಚೀನ ಕಾಲದಿಂದ ಬ್ರಹ್ಮರ್ಷಿಗಳ ಪರಂಪರೆ ಅಖಂಡವಾಗಿ ನಡೆದುಕೊಂಡು ಬಂದಿದೆ. ಪ್ರಾಚೀನ ಕಾಲದ ಬ್ರಹ್ಮರ್ಷಿಗಳ ಉದಾಹರಣೆ ನಾಮದೇವ, ವಶಿಷ್ಠ, ಯಾಜ್ಞ್ಯವಲ್ಕ. ಆಧುನಿಕ ಕಾಲದ ಉದಾಹರಣೆ ಶ್ರೀ ಅರವಿಂದ.

ಎರಡನೆಯ ಶಕ್ತಿ ಸೇವೆಯದು. ಬ್ರಹ್ಮರ್ಷಿಗಳ ಮೂಲಕ ಪ್ರಾಪ್ತವಾದ ಚಿಂತನ ಶಕ್ತಿಯ ಆಧಾರದ ಮೇಲೆ ಸಮಾಜಸೇವಕ ಲೋಕಸೇವೆಯಲ್ಲಿ ತೊಡಗುತ್ತಾನೆ. ಅವರನ್ನ ರಾಜರ್ಷಿ ಎನ್ನುತ್ತಾರೆ. ಹೀಗೆ ಸೇವೆಮಾಡುವ ಸೇವಕ ಸಮಾಜದಲ್ಲಿಲ್ಲದ ಪಕ್ಷದಲ್ಲಿ ಸಮಾಜದ ಒಂದು ಅಂಗ ಕ್ಷೀಣವಾಗುವುದಷ್ಟೇ ಅಲ್ಲ ಇಡೀ ಸಮಾಜ ಶುಷ್ಕವಾಗಿ ಬಿಡುವುದು. ಈ ಸೇವಕರು ಕೇವಲ ಸೇವಾಪಾರಾಯಣರಾಗಿರುತ್ತಾರೆ. ಅವರಿಗೆ ಯಾವುದೇ ಸ್ವಂತ ಸ್ವಾರ್ಥವಿರುವುದಿಲ್ಲ. ಒಂದು ಕಡೆಯಿಂದ ಬ್ರಹ್ಮರ್ಷಿಗಳಿಂದ ವಿಚಾರ ಪಡೆದುಕೊಳ್ಳುತ್ತಾರೆ. ಇನ್ನೊಂದು ಕಡೆ ಸಮಾಜ ಸೇವಾ ಕ್ಷೇತ್ರದಲ್ಲಿ ಅದನ್ನು ಅನುಷ್ಠಾನಕ್ಕೆ ತರುತ್ತಾರೆ. ಹಳೆಯ

ಪರಿಭಾಷೆಯಲ್ಲಿ ಅವರನ್ನು ರಾಜರ್ಷಿ ಎನ್ನುತ್ತಾರೆ. ಜ್ಞಾನಪೂರ್ವಕ, ಲೋಕರಂಜನೆ ಮಾಡುತ್ತಾ ಲೋಕಸೇವೆಯಲ್ಲಿ ತೊಡಗಿರುವ ಈ ರಾಜರ್ಷಿಗಳು ಕೂಡಾ ಸಮಾಜದ ಒಂದು ದೊಡ್ಡ ಶಕ್ತಿ.

ರಾಜರ್ಷಿ ಎಂದರೆ, ಸೇವೆಮಾಡುವ ದ್ರಷ್ಟಾ, ಕರ್ಮಯೋಗಿ ದ್ರಷ್ಟಾ, ಸೇವಾಕಾರ್ಯ-ಪಾರಾಯಣ. ಚಾತುರ್ವರ್ಣದ ಭಾಷೆಯಲ್ಲಿ ಕ್ಷತ್ರಿಯ ರಾಜಪ್ರಕೃತಿ ರಂಜನಾತ್- ಪ್ರಕೃತಿ ಎಂದರೆ ಪ್ರಜಾ. ಪ್ರಜಾ-ರಂಜನೆ ಮಾಡುವ ಸೇವಕನನ್ನು ರಾಜರ್ಷಿ ಎಂದೆನ್ನುತ್ತಾರೆ. ಮೊದಲು ರಾಜರುಗಳ ಮೂಲಕ ಸೇವೆ ಆಗುತ್ತಿತ್ತು, ಇಂದು ಸೇವಕರ ಮೂಲಕವಾಗುತ್ತದೆ. ಆದ್ದರಿಂದ ಅವರು ಇಂದು ಸೇವರ್ಷಿ. ರಾಜರ್ಷಿಯ ಕೆಲಸ ಸಮಾಜ-ವ್ಯವಸ್ಥೆಯನ್ನು ಒಳ್ಳೆಯ ರೀತಿಯಲ್ಲಿ ನಡೆಸುವುದು ಮತ್ತು ಸಮಾಜಸೇವೆ ಮಾಡುವುದು. ಅವರು ಸಮಾಜದ ಮಧ್ಯೆ ಹೋಗಬೇಕು, ಮನೆ ಮನೆ ತಲುಪಬೇಕು, ಎಲ್ಲರ ದುಃಖ ಕೇಳಬೇಕು, ದುಃಖ ನಿವಾರಣೆಯ ಪ್ರಯತ್ನ ಮಾಡಬೇಕು, ಒಂದು ವೇಳೆ ಸಾಧ್ಯವಾದರೆ ಸಹಾನುಭೂತಿಯನ್ನು ಕೊಡಬೇಕು-ಈ ಎಲ್ಲವೂ ಸೇವರ್ಷಿಯ ಕೆಲಸವಾಗಿದೆ. ಜ್ಞಾನದ ಸಾಮಾಜಿಕ ಪ್ರಯೋಗವನ್ನು ರಾಜರ್ಷಿಗಳು ಮಾಡುತ್ತಾರೆ. ಸಿದ್ಧಾಂತದ ಸಾಮುದಾಯಿಕ ಪ್ರಯೋಗವನ್ನು(practical aplication) ಮಾಡುವುದು ರಾಜರ್ಷಿಗಳ ಕೆಲಸ. ಪ್ರಾಚೀನಕಾಲದಲ್ಲಿ ರಾಜರ್ಷಿಗಳ ಉದಾಹರಣೆ ರಾಜಾ-ಮನು ಮತ್ತು ರಾಜಾ ಜನಕ. ಆಧುನಿಕ ಉದಾಹರಣೆ ಮಹಾತ್ಮಾ ಗಾಂಧೀ. ಆಗಾಗ್ಗೆ ಈ ಋಷಿಗಳ ಪರಂಪರೆ ಮುರಿಯುತ್ತದೆ.

ಮೂರನೆಯ ಶಕ್ತಿ ಸಾಹಿತ್ಯದ್ದು. ಯಾವ ವಿಚಾರಗಳದು ಜ್ಞಾನಿಗಳಿಗೆ ಅನುಭವವಾಗುತ್ತದೋ ಮತ್ತು ಯಾವುದು ಆತ್ಮದ ಅಂತರಂಗದಲ್ಲಿ ಸಿದ್ಧವಾಗಿರುತ್ತದೋ ಅ ವಿಚಾರಗಳನ್ನು ಲೋಕವಾಣಿಯಲ್ಲಿ ಜನರಿಗೆ ಗ್ರಹಣವಾಗಲಿ ಇಂಥ ಆಯ್ದ ಶಬ್ದಗಳಲ್ಲಿ ಆ ಜ್ಞಾನಿಗಳು ಪ್ರಕಟಗೊಳಿಸುತ್ತಾರೆ. ಇದರಲ್ಲಿ ವಿಚಾರಗಳನ್ನಂತೂ ಗುರ್ತಿಸಲೇ ಬೇಕಾಗುತ್ತದೆ. ಆದರೆ ಆ ವಿಚಾರಗಳಿಗೆ ವಾಣಿಯ ಪೋಷಾಕನ್ನು ತೊಡಿಸಬೇಕಾಗುತ್ತದೆ. ಹಾಗಿಲ್ಲವಾದರೆ ಉಚಿತವಾದ ಶಬ್ದಗಳ ಅಭಾವದಲ್ಲಿ ಪ್ರಕಾಶದ ಬದಲಾಗಿ ಅಪ್ರಕಾಶ ಕೂಡ ಆಗುತ್ತದೆ. ವಿಚಾರಗಳಂತೂ ಒಳಗಿನ ಆಳದಲ್ಲಿ ಆಗುತ್ತವೆ. ಅದನ್ನು ಪ್ರಕಟಗೊಳಿಸ ಹೊರಟಲ್ಲಿ ಯಾವುದಾದರೂ ಒಂದು ಶಬ್ದದ ಆಶ್ರಯ ತೆಗೆದುಕೊಳ್ಳಬೇಕಾಗುತ್ತದೆ. ಆಗ ಸ್ವಲ್ಪ ನ್ಯೂನ್ಯತೆ ಉಳಿಯುವ ಸಂಭವವಿರುತ್ತದೆ. ಎರಡನೆಯ ಶಬ್ದವನ್ನು ಉಪಯೋಗಿಸಿದರೆ ಸ್ವಲ್ಪ ಬೇರೆಯೇ ಭಾವ ಕೂಡ ಪ್ರಕಟವಾಗಬಹುದು. ಎರಡನ್ನೂ ಪ್ರಯೋಗಿಸಿದಲ್ಲಿ ಇನ್ನಾವುದೋ ವಿಪರೀತ ಭಾವ ಕೂಡ ಪ್ರಕಟವಾಗಬಹುದು. ಆದ್ದರಿಂದ ಒಂದೊಂದು ಶಬ್ದದ ಬಗ್ಗೆ ವಿವೇಕವನ್ನಿಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ ನ್ಯೂನ ಭಾವ ಪ್ರಕಟವಾಗದಿರಲೆಂದು. ಅತಿರಿಕ್ತ ಭಾವ, ವಿಪರೀತ ಭಾವ ಪ್ರಕಟವಾಗದಿರಲೆಂದು.

ಈ ತ್ರಿವಿಧ ದೋಷಗಳನ್ನು ತಳ್ಳಿಹಾಕಿ ವಿಚಾರವನ್ನು ಸರಿಯಾಗಿ ಹೇಗಿರಬೇಕೊ ಹಾಗೆ ಪ್ರಕಟಗೊಳಿಸಬೇಕು. ಜನತೆಯ ಹೃದಯಗಳವರೆಗೆ ವಿಚಾರವನ್ನು ತಲುಪಿಸುವ ಕುಶಲತೆಯ ಶಕ್ತಿ ಯಾವುದರಲ್ಲಿರುತ್ತದೊ ಅದು ಈ ಮೂರನೆಯ ಶಕ್ತಿ. ಅದನ್ನು ದೇವರ್ಷಿ ಎನ್ನುತ್ತಾರೆ.

ದೇವರ್ಷಿ ಎಂದರೆ ಭಕ್ತಿಮಾರ್ಗಿದ್ರಷ್ಟಾ. ಈಶ್ವರನ ಸಗುಣರೂಪದ ಉಪಾಸನೆ ಮಾಡುವ ದೃಷ್ಟಿಸಂಪನ್ನ ಪುರುಷ. ಭಗವಂತನ ಗುಣಗಾನ ಮಾಡುವವ ಅದರಲ್ಲಿಯೆ ತನ್ಮಯನಾಗಿರುವವ. ಅವನಿಗೆ ಬ್ರಹ್ಮನ ಶೋಧನೆ ಮಾಡುವುದು ಗೊತಿಲ್ಲ ಅಥವಾ ತನ್ನನ್ನು ಕರ್ಮಯೋಗದಲ್ಲೂ ತೊಡಗಿಸುವುದಿಲ್ಲ. ಕೊನೆಯವನಿಗೂ ಸುಖವಾಗಲಿ ಎಂದು ಅವನು ಹಾಡಿಯೇ ಹಾಡುತ್ತಾನೆ. ಅದನ್ನು ಯಾರೂ ಕೇಳಲಿ, ಕೇಳದಯೇ ಇರಲಿ. ಇವರನ್ನು ಆಧ್ಯಾತ್ಮಿಕ ಸಾಹಿತ್ಯಕರು ಎಂದು ಹೇಳಬಹುದು. ಸಾಹಿತ್ಯಕ, ಕವಿ, ಸಂಗೀತಜ್ಞ, ಚಿತ್ರಕಾರ ಮುಂತಾದವರು ದೇವರ್ಷಿಗಳು. ಅವರು ಭಗವಂತನ ಗುಣಗಾನ ಮಾಡುತ್ತಾರೆ. ಮತ್ತು ರೂಪದರ್ಶನ ಮಾಡುತ್ತಾರೆ. ಹಾಗೆ ನೋಡಿದರೆ ಭಗವಂತನು ಹೆಸರಿಲ್ಲದವನು ಮತ್ತು ರೂಪವಿಲ್ಲದವನೂ ಆಗಿದ್ದಾನೆ. ಆದರೆ ಇವರು ಹೆಸರನ್ನು ಮತ್ತು ರೂಪವನ್ನು ತಿಳಿಸುತ್ತಾರೆ. ದೇವರ್ಷಿಯ ಕೆಲಸ ಕಲೆಯನ್ನು ವಿಕಾಸ ಮಾಡುವುದಾಗಿದೆ. ಇದಕ್ಕೆ ಪ್ರಾಚೀನ ಉದಾಹರಣೆ ದೇವರ್ಷಿ ನಾರದ, ಸುಖದೇವ, ವಾಲ್ಮೀಕಿ. ಆಧುನಿಕ ಕಾಲದಲ್ಲಿ ರವೀಂದ್ರನಾಥ್ ಟಾಗೂರ್‌ರನ್ನು ದೇವರ್ಷಿ ಎಂದು ಕರೆಯಬಹುದು.

ನಾರದರು ಎಲ್ಲರನ್ನು ಭೇಟಿ ಮಾಡುತ್ತಿದ್ದರು. ದೇವ, ದಾನವ, ಮಾನವ ಎಲ್ಲರಲ್ಲಿಯೂ ಹೋಗಿ ಬರುತ್ತಿದ್ದರು. ಯಾವ ಈ ದಿವ್ಯಶಕ್ತಿ ವಾಕ್‌ಪ್ರಚಾರದಿದೆಯೋ ಅದು ಯಾರ ಬಳಿ ಉತ್ತಮ ಭಕ್ತಿ ಇದೆಯೋ ಅವನಿಗೆ ಸಿದ್ಧಿತವಾಗುತ್ತದೆ. ಯಾವ ರೀತಿ ಬ್ರಹ್ಮರ್ಷಿಯ ಲಕ್ಷಣ ಚಿಂತನ ಶಕ್ತಿಯಾಗಿದೆಯೊ ರಾಜರ್ಷಿಯ ಲಕ್ಷಣ ಅವನ ನಿರಹಂಕಾರ ಸೇವಾ ಭಾವನೆಯಾಗಿದೆ. ಹಾಗೆಯೇ ದೇವರ್ಷಿಯ ಲಕ್ಷಣ ಎಲ್ಲರ ಬಗ್ಗೆ ಪ್ರೇಮದಿಂದ ತುಂಬಿರುವ ಮನಸ್ಸು. ಎಲ್ಲರಲ್ಲಿಯ ವಿಕಾರಗಳನ್ನು ಹುಡುಕುವುದರ ಬಗ್ಗೆ ಬುದ್ಧಿಯ ತಟಸ್ಥತೆ, ವಾಣಿಯ ನಿರ್ವಿಕಾರತೆ ಮತ್ತು ತನ್ನ ಬಗ್ಗೆ ನಿರಹಂಕಾರತೆ ಅತ್ಯಗತ್ಯವಾಗಿವೆ. ಎಲ್ಲಿ ಸೂಕ್ಷ್ಮ ಬುದ್ಧಿಯಿಂದ ಮನನಮಾಡಿ ವಾಣಿಯ ಪ್ರಯೋಗವಾಗುತ್ತದೊ ಅಲ್ಲಿ ಎಲ್ಲ ಪ್ರಕಾರದ ಶೋಭೆ, ಐಶ್ವರ್ಯ, ವೈಭವ, ಸೌಂದರ್ಯ ಮತ್ತು ಆನಂದದ ವೃದ್ಧಿಯಾಗುತ್ತದೆ.

– ***ಅನು : ಸು.ಕೌ.*** (ಮುಂದುವರಿಯುತ್ತದೆ)

* * *

ಜನಪದ ಧ್ವನಿ

ಶಿಲಾಯುಗಕ್ಕೆ ದೇಶವನ್ನು ಕೊಂಡೊಯ್ಯುತ್ತಿರುವ ರಾಜಕಾರಣಿಗಳು

ಕುಮಾರಸ್ವಾಮಿಯವರ ಆಡಳಿತದ ಕೊನೆಯ ಮತ್ತು ಅನಂತರದ ಕೆಲವು ದಿನಗಳಲ್ಲಿ ನಮ್ಮ ಮಾಜಿ ಮಂತ್ರಿಗಳು, ಶಾಸಕರು, ಅಧಿಕಾರಕ್ಕಾಗಿ ರಿಯಾಯಿತಿ ದರದಲ್ಲಿ ಸೀಸನ್ ಟಿಕೆಟ್‌ನಲ್ಲಿ ರೈಲು ಅಥವಾ ಬಸ್ಸಿನಲ್ಲಿ ದಿನವೂ ಓಡಾಡುವಂತೆ ಒಂಟಿಯಾಗಿ, ಗುಂಪುಗಳಲ್ಲಿ ದೆಹಲಿಗೆ ವಿಮಾನದಲ್ಲಿ ಹೋಗಿ ಬರುತ್ತಿದ್ದರು. ಒಂದು ವಿಮಾನವನ್ನ ಪೂರ್ತಿಯಾಗಿ ಬಾಡಿಗೆಗೆ ಪಡೆದದ್ದೂ ಉಂಟು. ತಮ್ಮ ಪಕ್ಷದ ಶಾಸಕರನ್ನು ಬೇರೆ ಪಕ್ಷದವರು ಹಾರಿಸಿಕೊಂಡು ಹೋಗಬಹದೆಂಬ ಭಯದಿಂದ ಅವರುಗಳನ್ನು ಊರಾಚೆ ಇರುವ ಪಂಚತಾರಾ ಹೋಟೆಲ್‌ಗಳಲ್ಲಿ ದನಕರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿಹಾಕಿದಂತೆ ಕೂಡಿ ಹಾಕಿದ್ದರು. ಇದಕ್ಕೆಲ್ಲಾ ಎಷ್ಟು ಹಣ ಖರ್ಚಾಯಿತು ಆ ಹಣ ಎಲ್ಲಿಂದ ಹೇಗೆ ಬಂದಿತು ಎಂಬುದನ್ನು ಕಂಡುಹಿಡಿದರೆ ರೋಮಾಂಚಕ ಪತ್ತೆದಾರಿ ಕಥೆಯಾಗುತ್ತದೆ.

ಈ ಮಹಾನುಭಾವರು ಅಧಿಕಾರಕ್ಕಾಗಿ ತೀರ್ಥಯಾತ್ರೆಗಳನ್ನು ಮಾಡಿದರು. ಪೂಜೆ, ಹೋಮ, ಹವನಗಳನ್ನು ಮಾಡಿದರು. ಪ್ರತಿಯೊಂದಕ್ಕೂ ವಾರ, ತಿಥಿ, ಲಗ್ನಗಳನ್ನು ನೋಡಿದರು. ಭವಿಷ್ಯ, ಶಕುನ, ಪುರಾಣ, ಜ್ಯೋತಿಷ್ಯ ಹೇಳುವವರು ಇವರ ಆಪ್ತ ಕಾರ್ಯದರ್ಶಿಗಳಾದರು. ಮಠಾಧೀಶರ ದರ್ಶನ, ಆಶೀರ್ವಾದ ಪಡೆದರು. ಮಾನವೀಯ ಮೌಲ್ಯಗಳನ್ನು ಮೆರೆಸಬೇಕಾದವರೆಲ್ಲಾ ಜಾತಿಯ ಮುಖಂಡರಾದರು. ಚುನಾವಣೆ ಬಂತೆಂದರೆ ಆಯಾ ಕ್ಷೇತ್ರದಲ್ಲಿ ಯಾವ ಯಾವ ಜಾತಿಯವರು ಎಷ್ಟು ಇದ್ದಾರೆಂದು ಲೆಕ್ಕ ಹಾಕುತ್ತಾರೆಯೇ ಹೊರತು ಅಲ್ಲಿನ ಅವಶ್ಯಕತೆಗಳನ್ನು ಗುರುತಿಸುವುದಿಲ್ಲ.

ಒಂದು ವಾರ ಮುಖ್ಯಮಂತ್ರಿಯಾಗಿದ್ದ ಮಹಾನುಭಾವರು ತಮ್ಮ ಕುರ್ಚಿ ಭದ್ರವಾಗಿಲ್ಲದಿದ್ದರೂ, ಮಂತ್ರಿಮಂಡಲ ಪೂರ್ತಿಯಾಗಿ ರಚನೆಯಾಗಿಲ್ಲದಿದ್ದರೂ ತಮ್ಮ ಕಛೇರಿಯಲ್ಲಿ ಹೋಮ, ಹವನ ಮಾಡಿದರು. ಮೇಜು, ಕುರ್ಚಿ, ಕಿಟಕಿ, ಬಾಗಿಲುಗಳಿಗೆಲ್ಲಾ ಪೂಜೆಮಾಡಿದರು. ಅಧಿಕಾರಕ್ಕಾಗಿ ಜ್ಯೋತಿಷಿಗಳ ಸಲಹೆಯಂತೆ ತಮ್ಮ ಹೆಸರುಗಳನ್ನು ಸಣ್ಣದು, ದೊಡ್ಡದು ಮಾಡಿಕೊಂಡರು. ಬದಲಾಯಿಸಿಕೊಂಡರು. ಈ ಮಹಾನುಭಾವರು ನಮ್ಮನ್ನೆಲ್ಲಾ ಇಪ್ಪತ್ತೊಂದನೇ ಶತಮಾನದಿಂದ ಶಿಲಾಯುಗಕ್ಕೆ ಕರೆದುಕೊಂಡು ಹೋಗುವಂತೆ ಕಾಣುತ್ತದೆ. ಒಂದುವಾರ ಮಾತ್ರ ಮುಖ್ಯಮಂತ್ರಿಯಾಗಿದ್ದರೂ ಸರ್ಕಾರದ ನಿರ್ಧಾರಗಳನ್ನು ಪ್ರಕಟಿಸಿದರು. ಐದಾರು ಜನ ಪ್ರಮುಖ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಅಪಹಾಸ್ಯಕ್ಕೆ ಗುರಿಯಾದರು.

ಈ ರಾಜಕೀಯ ಅಧಿಕಾರಕ್ಕೆ ಇಷ್ಟೊಂದು ಆಕರ್ಷಣೆಗಳಿರಲು ಮುಖ್ಯಕಾರಣಗಳು ಅಧಿಕಾರದಿಂದ ಐಶ್ವರ್ಯ, ತಮ್ಮ ಯೋಗ್ಯತೆಗೆ ಮೀರಿದ ಗೌರವ, ಅಂತಸ್ತು, ಪ್ರಚಾರ, ಎಲ್ಲಾ ಕಡೆ ವಂದಿಮಾಗಧರು. ಇವರ ಆಗಮನಕ್ಕೆ ಜನ ಗಂಟೆಗಟ್ಟಲೆ ಕಾಯುವುದು. ಎಲ್ಲಿ ಹೋದರೂ ಇವರ ನೆರಳಿನಂತೆ ಛಾಯಾಗ್ರಾಹಕರು, ಪತ್ರಕರ್ತರು ಹಿಂಬಾಲಿಸಿ ಇವರು ಕೆಮ್ಮಿದ್ದು ಉಗುಳಿದ್ದನ್ನೆಲ್ಲಾ ಸುದ್ದಿಮಾಡುವುದು. ಈ ಆಕರ್ಷಣೆಗಳು ಕಡಿಮೆಯಾದಷ್ಟೂ ಮಟ್ಟಿಗೆ ರಾಜಕಾರಣ ಹಸನಾಗುತ್ತದೆ. ಆಗುತ್ತದೆಯೇ? ನಾನು ಈ ವಿಷಯದಲ್ಲಿ ನಿರಾಶಾವಾದಿ.

ಅಧಿಕಾರದ ಮಾಯಾಮೋಹಿನಿಯೆ! ನಿನಗೆ ಸಾಷ್ಟಂಗ ನಮಸ್ಕಾರ. ನಿನ್ನ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ.

– ಎ. ವೆಂಕಟರಮಣ ಶೆಟ್ಟಿ, ಮೈಸೂರು.

ಗಾಂಧೀತತ್ವ ಪ್ರಭಾವಿತ ಕೃಷಿಪಂಡಿತ : ಚೇರ್ಕಾಡಿ ರಾಮಚಂದ್ರರಾಯರು

– ಆರೂರು ಮಂಜುನಾಥರಾವ್

ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀಜಿಯವರ ಒಡನಾಟದಲ್ಲಿದ್ದವರು, ಭಾರತಕ್ಕೆ ಸ್ವಾತಂತ್ರದ ಅಗತ್ಯವನ್ನು ಕಂಡುಕೊಂಡವರು, ಅವರ ಮಾರ್ಗದರ್ಶನದಲ್ಲಿ ನಂಬಿಕೆಯಿದ್ದವರು, ಅವರನ್ನು ನಾಯಕರನ್ನಾಗಿ ಸ್ವೀಕರಿಸಿದವರು ದೇಶ ವಿದೇಶದಲ್ಲಿ ಅಸಂಖ್ಯಾತ ಜನರಿದ್ದರು, ಈಗಲೂ ಇದ್ದಾರೆ. ಅವರ ಸರಳ ಜೀವನವನ್ನು ಅನುಸರಿಸಿದವರು ಕೂಡಾ ಬಹಳಷ್ಟು ಮಂದಿ. ಆದರೆ ಅವರ ಸ್ವಾವಲಂಬನೆ ಜೀವನದ ವಿಚಾರವನ್ನು ಆಚಾರಕ್ಕೆ ತಂದು ಬದುಕಿನಲ್ಲಿ ಯಶಸ್ಸನ್ನು ಕಂಡುಕೊಂಡವರು ಬಹಳ ಜನರಿರಲಿಕ್ಕಿಲ್ಲ.

'ಕೃಷಿ ಮತ್ತು ಗುಡಿಕೈಗಾರಿಕೆ' ಎರಡನ್ನೂ ಜೀವನ ನಿರ್ವಹಣೆಗೆ ಪ್ರತಿಯೊಬ್ಬ ಭಾರತೀಯನೂ ಅನುಸರಿಸಿ ಸ್ವಾವಲಂಬಿಯಾದಲ್ಲಿ ಭಾರತದ ಬಡತನ ನಿವಾರಣೆಯಾಗುವುದೆಂಬ ಅಚಲ ನಂಬಿಕೆಯಿಟ್ಟವರು ಗಾಂಧೀಜಿ. ಅದರಂತೆ ದೇಶದ ಸಮಸ್ತ ಜನರಿಗೆ ಅನುಸರಿಸಲು ಸ್ವಾತಂತ್ರ್ಯ ಪೂರ್ವದಲ್ಲಿಯೇ ಕರೆಯಿತ್ತಿದ್ದರು. ದೇಶದ ಪ್ರತಿಯೊಬ್ಬ ಪ್ರಜೆಯೂ ಕನಿಷ್ಠ ಒಂದು ಗಂಟೆಯಾದರೂ ಭೂಮಿಯಲ್ಲಿ ದುಡಿಯುವುದು ಅಗತ್ಯವಿದೆಯೆಂದು ಮನಗಂಡಿದ್ದರು. ಆಧುನಿಕ ಆವಿಷ್ಕಾರಗಳನ್ನು ಅವರು ವಿರೋಧಿಸದಿದ್ದರೂ, ಯಂತ್ರಗಳು ನಮ್ಮ ಮೇಲೆ ಸವಾರಿ ಮಾಡುವುದನ್ನು ಅವರು ಒಪ್ಪಿರಲಿಲ್ಲ. ನಮ್ಮಲ್ಲಿ ಮಾನವ ಸಂಪನ್ಮೂಲದ ಕೊರತೆಯಿರದ ಕಾರಣ ಅದರ ಸದ್ಬಳಕೆ ಅಂದರೆ ಮಾನವ ಶಕ್ತಿಯಿಂದಲೇ ನಮಗೆ ಬೇಕಾದ ಸಾಮಾಗ್ರಿಗಳನ್ನು ಹೊಂದಿಸಿಕೊಂಡಲ್ಲಿ ಪರಿಸರದ ನಾಶವಾಗದೇ ಈ ಜಗತ್ತನ್ನು ಮುಂದಿನ ತಲೆಮಾರಿಗೆ ಸುಸ್ಥಿತಿಯಲ್ಲಿ ವರ್ಗಾವಣೆ ಮಾಡಲು ಸಾಧ್ಯವೆಂದು ನಂಬಿದವರು. ಅವರ ಅದ್ಭುತ ವಿಚಾರ ನಮ್ಮ ದೇಶವನ್ನಾಳಿದ, ಆಳುತ್ತಿರುವ ಪ್ರಜಾ ಪ್ರತಿನಿಧಿಗಳಿಗೆ ಮತ್ತು ಅಧಿಕಾರಶಾಹಿಗಳಿಗೆ ಕ್ಷುಲ್ಲಕ ವಿಚಾರವಾಗಿ ಕಂಡದ್ದರ ಫಲ, ಭಾರತದ ಬಹುಸಂಖ್ಯಾತ ಜನರು ಸ್ವತಂತ್ರವಾಗಿ ಅರವತ್ತು ವರ್ಷಗಳ ನಂತರವೂ ಬಡತನದಲ್ಲಿ ಕಾಲಕಳೆಯುತ್ತಿರುವುದು, ಅನುಕೂಲ ಸ್ಥಿತಿಯಲ್ಲಿರುವವರು, ಪ್ರಜ್ಞಾವಂತ ನಾಗರಿಕರು ಹೆಮ್ಮೆಪಡುವ ವಿಷಯವಲ್ಲ. ಸುಖ ಅನುಭವಿಸುವ ಗುಂಗಿನಲ್ಲಿ ಆಧುನಿಕ ಆವಿಷ್ಕಾರಗಳನ್ನು ಮಾಡಿ, ನಿಸರ್ಗದ ಸಮತೋಲನವನ್ನು ಕಾಪಾಡುವ ನಿಟ್ಟಿನಲ್ಲಿ ಯಾವ ಕ್ರಮವನ್ನೂ ಕೈಗೊಳ್ಳದೆ, ಭೂಮಿಯನ್ನು ಬಿಸಿ ಮಾಡಿ ಯಾವ ಜೀವಜಂತುಗಳೂ ಬದುಕಲಾರದ ಪರಿಸ್ಥಿತಿಯನ್ನು ನಿರ್ಮಾಣ ಮಾಡುವಲ್ಲಿ ಯಶಸ್ವಿಯಾಗಿರುವುದು ನಮ್ಮ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿ. ಮಾನವನ ಎಲ್ಲಾ ಸಮಸ್ಯೆಗಳ ಪರಿಹಾರವನ್ನು ಗಾಂಧೀಜಿ ಬದುಕಿದ ರೀತಿಯಿಂದಲೇ ಕಲಿತುಕೊಳ್ಳುವಂತಾದ್ದು. ಅವರ ಜೀವನ ಚರಿತ್ರೆಯಲ್ಲಿ ಅವರೇ ಬರೆದಂತೆ 'ನನ್ನ ಕೆಲಸವೇ ಈ ಪ್ರಪಂಚಕ್ಕೆ ನನ್ನ ಸಂದೇಶ' ವೆಂದ ಅವರ ಮಾತು ಅಕ್ಷರಶಃ ಸತ್ಯ.

ಗಾಂಧೀಜಿಯವರನ್ನು ಭೇಟಿಯಾಗಿ ಅವರನ್ನು ಹತ್ತಿರದಿಂದ ಕಂಡವರು ಅವರಿಂದ ಪ್ರಭಾವಿತರಾಗಿ ಸರಳ ಜೀವನವನ್ನು ನಡೆಸಿದವರ ಸಂಖ್ಯೆ ಲೆಕ್ಕವಿಲ್ಲದಷ್ಟು. ಆದರೆ ದೇಶದ ಮೂಲೆಯ ಒಂದು ಹಳ್ಳಿಯಲ್ಲಿ ಅವರ ವಿಚಾರಗಳನ್ನು ಕೇಳಿ, ಓದಿ ಅವುಗಳನ್ನು ತನ್ನ ಜೀವನದಲ್ಲಿ ಅನುಷ್ಠಾನಕ್ಕೆ ತಂದ ವ್ಯಕ್ತಿಗಳು ಅಪರೂಪ. ಅತೀ ಸಣ್ಣ, ಎರಡನೆಯ ವಯಸ್ಸಿನಲ್ಲಿಯೇ, ತಂದೆ ತಾಯಿಯನ್ನು ಕಳೆದುಕೊಂಡು, ಎಲ್ಲೋ ಹುಟ್ಟಿ, ಎಲ್ಲೋ ಬೆಳೆದು, ಜೀವನೋಪಾಯಕ್ಕೆ ಊರೂರು ತಿರುಗಾಡಿ, ಕೊನೆಯಲ್ಲಿ ಭೂಮಿತಾಯಿಯನ್ನು ನಂಬಿ, ಜೀವನದಲ್ಲಿ ಜಯವನ್ನು ಪಡೆದ ಅಪರೂಪದ ವ್ಯಕ್ತಿಯೊಬ್ಬರು ಕರ್ನಾಟಕದ ಉಡುಪಿ ಜಿಲ್ಲೆಯ ಆರೂರಿನಲ್ಲಿ ತಮ್ಮ ಜೀವನದಲ್ಲಿ ಗಾಂಧೀಜಿಯವರ ತತ್ವವನ್ನು ಅಳವಡಿಸಿಕೊಂಡು ಯಶಸ್ವಿಯಾಗಿದ್ದಾರೆ. ಜೀವನದ ಒಂಭತ್ತು ದಶಕಗಳನ್ನು ಪೂರೈಸಿದ ಇವರು ತಮ್ಮ ಜೀವನವನ್ನು ಹಸನು ಮಾಡಿಕೊಂಡದ್ದಲ್ಲದೇ, ದೇಶದ ಲಕ್ಷಾಂತರ ಜನರಿಗೆ ಗಾಂಧೀ ಜೀವನ ಸಂದೇಶವನ್ನು ಕೃಷಿಯ ಮೂಲಕ ತೋರಿಸಿಕೊಟ್ಟಿದ್ದಾರೆ. ಭೂಮಿಯನ್ನು ತಾಯಿಯೆಂದೇ ಪರಿಗಣಿಸಿ ಯಾರಿಗೂ ಹೊರೆಯಾಗದೆ ಬದುಕುತ್ತಿರುವ ಅಪರೂಪದ ವ್ಯಕ್ತಿ ಅವರೇ **'ಕೃಷಿ ಪಂಡಿತ' ಶ್ರೀ ಚೇರ್ಕಾಡಿ ರಾಮಚಂದ್ರರಾಯರು.**

ಒಬ್ಬ ವ್ಯಕ್ತಿ ತನ್ನ ಸ್ವಂತ ಪರಿಶ್ರಮ, ಹೋರಾಟ ಹಾಗೂ ಸೋಲನ್ನು ಸವಾಲಾಗಿ ಸ್ವೀಕರಿಸಿದರೆ ಜೀವನದಲ್ಲಿ ಯಶಸ್ಸನ್ನು ಸಾಧಿಸಲು ಹಾಗೂ 'ವಿನಾ ದೈನ್ಯೇನ' ಜೀವನವನ್ನು ನಡೆಸಲು ಸಾಧ್ಯ ಎನ್ನುವುದನ್ನು ಇವರ ಬದುಕಿನ ಇಣುಕು ನೋಟದಿಂದಲೇ ಕಂಡುಕೊಳ್ಳಬಹುದು. ಮಹಾತ್ಮಾ ಗಾಂಧೀಜಿಯವರನ್ನು ನೋಡದಿದ್ದರೂ ಅವರ ತತ್ವಗಳ ಅನುಷ್ಠಾನವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡ ಇವರು ಗಾಂಧಿಯವರು ನಿಜವಾದ ಅನುಯಾಯಿ. ಗಾಂಧೀಜಿಯವರ ಅನ್ನ, ವಸ್ತ್ರ ಸ್ವಾವಲಂಬನೆ ಮತ್ತು ವಿನೋಬಾ ಭಾವೆಯವರ ಪ್ರಕೃತಿಯ ಒಡನಾಟದ ತತ್ವಗಳಲ್ಲಿ ಅಚಲ ನಂಬಿಕೆಯಿರಿಸಿ, ಅದರಲ್ಲಿ ಯಶಸ್ಸನ್ನು ಕಂಡ ಸರಳ ಸಜ್ಜನಿಕೆಯ ಶ್ರೀರಾಯರ ಬದುಕು ತೆರೆದ ಪುಸ್ತಕದಂತೆ.

'ಕೃಷಿತೋ ನಾಸ್ತಿ ದುರ್ಭಿಕ್ಷ್ಯಂ' ಎನ್ನುವುದರಲ್ಲಿ ಇತ್ತೀಚಿಗೆ ನಂಬಿಕೆಯುಳ್ಳವರು ಬಹಳ ವಿರಳ. ಆದರೆ ಇದು ಸರ್ವಕಾಲಿಕ ಸತ್ಯ ಎಂದು ಧೃಢವಾಗಿ ನಂಬಿ ಸಾಧಿಸಿ ತೋರಿಸಿದ್ದಾರೆ. ಕೃಷಿಯನ್ನು ನಂಬಿಕೊಂಡು ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲವೆನ್ನುವ ಇಂಗಿತವನ್ನು ಹೊಂದಿದ ಸಣ್ಣ ರೈತರ ಮಧ್ಯದಲ್ಲಿ ಕೇವಲ ಎರಡು ಎಕರೆ ಭೂಮಿಯಲ್ಲಿ ತೃಪ್ತಿ ಹಾಗೂ ನೆಮ್ಮದಿಯ ಜೀವನ ನಡೆಸಲು ಸಾಧ್ಯವಿದೆಯೆಂದು ಸಾಧಿಸಿ ತೋರಿಸಿದ್ದಾರೆ. ನಿಸರ್ಗದಿಂದ ದೂರ ಹೋದಷ್ಟು, ಕಷ್ಟಗಳು ಒಂದೊಂದಾಗಿ ನಮ್ಮ ಹಿಂದೆ ಬರುತ್ತವೆಯೆಂಬುದನ್ನು ಸ್ವಂತ ಅನುಭವದಿಂದ ಕಂಡುಕೊಂಡಿದ್ದಾರೆ. ಭೂಮಿಯನ್ನು ತಾಯಿಯಂತೆ ಅತ್ಯಂತ ಗೌರವದಿಂದ ಕಂಡುಕೊಂಡು ಕಾಮಧೇನು ನೀಡುವಂತಹ ಪ್ರತಿಫಲವನ್ನು ಪಡೆದಿದ್ದಾರೆ.

ನೆಮ್ಮದಿಯ, ಸ್ವತಂತ್ರವಾದ ಬದುಕನ್ನು ಸಾಗಿಸಲು, ಕೇವಲ ಎರಡೆಕರೆ

ಜಮೀನು, ಅದು ಗುಡ್ಡ ಸ್ಥಳವಾದರೂ ಸಾಕು, ಎಂದು ಸಾಧಿಸಿ ತೋರಿಸಿದ ಕೀರ್ತಿ ಇವರದು. ಅರವತ್ತರ ದಶಕದಲ್ಲಿ ಆಹಾರದ ಸಮಸ್ಯೆ ಉದ್ಭವಿಸಿದಾಗ, ಗುಡ್ಡೆ ಜಾಗದಲ್ಲಿ ಆಹಾರ ಧಾನ್ಯಗಳನ್ನು ನೀರಿನ ಪಸೆಯಿಂದಲೇ ಬೆಳೆದು, ಇಡೀ ರಾಷ್ಟ್ರಕ್ಕೆ ಅನ್ನ ಸ್ವಾವಲಂಬನೆಯ ಮಾರ್ಗ ತೋರಿಸಿದವರು. ಈ ಯಶಸ್ಸಿನ ಹಿಂದೆ ಸೋಮಾರಿತನವಿಲ್ಲದ, ಸತತ ಪರಿಶ್ರಮ, ಸೃಜನಶೀಲತೆ, ಸರಳ ಜೀವನದ ತತ್ವಗಳಿವೆ.

ಅನಾಥರಾಗಿದ್ದ ರಾಯರಿಗೆ ಯಾವ ಜೀವನೋಪಾಯ ವೃತ್ತಿಯಿರಲಿಲ್ಲ. ಸಣ್ಣವನಿರುವಾಗಲೇ ಗಾಂಧೀ ತತ್ವದಿಂದ ಪ್ರಭಾವಿತರಾಗಿ ತನ್ನ ಕುಲಕಸುಬಲ್ಲದ ಮಗ್ಗ ನೇಯುವುದನ್ನು ತನ್ನ ಸ್ವಂತ ಪರಿಶ್ರಮದಿಂದ ಕಲಿತು, ಖಾದಿ ಬಟ್ಟೆ ನೇಯುವ ಕಾಯಕವನ್ನು ಜೀವನ ವೃತ್ತಿಯನ್ನಾಗಿ ಸ್ವೀಕರಿಸಿದ್ದರು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಸಣ್ಣ ಪೇಟೆಯಲ್ಲಿ ಖಾದೀ ಕೇಂದ್ರದಲ್ಲಿ ಬಟ್ಟೆ ನೇಯುವುದರಲ್ಲಿ ತನ್ನ ಜೀವನ ನಿರ್ವಹಣೆ ಮಾಡಿಕೊಂಡಿದ್ದರು. ಆಗ ಹಣ ತೆತ್ತರೂ ಕೂಡಾ ಎರಡು ಹೊತ್ತು ಊಟ ಮಾಡಲು ಅವಶ್ಯಕವಾದ ಅಕ್ಕಿ ಸಿಗಲಾರದ ಪರಿಸ್ಥಿತಿ ಎದುರಾಯಿತು. ಆಗ ಗಾಂಧೀಜಿಯವರ ಪರಿಹಾರದ ವಿಚಾರ, ಪ್ರತಿಯೊಬ್ಬ ಮನುಷ್ಯನೂ ತನಗೆ ಬೇಕಾದ ಅನ್ನ, ವಸ್ತ್ರದಲ್ಲಿ ಸ್ವಾವಲಂಬನೆ ಸಾಧಿಸಿದಲ್ಲಿ ಇಂತಹ ಸಂದಿಗ್ಧ ಪರಿಸ್ಥಿತಿ ಬರುವುದಿಲ್ಲವೆನ್ನುವ ಮಾತು ರಾಯರನ್ನು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಲು ಪ್ರೇರೇಪಿಸಿತು.

ಬೇಸಾಯ ಯೋಗ್ಯವಾದ ಭೂಮಿ ಖರೀದಿಸಿ ಸಾಗುವಳಿ ಮಾಡಲು ಹಣವಿಲ್ಲದ ಕಾರಣ, ಯಾವುದಾದರೂ ತುಂಡು ಭೂಮಿಯನ್ನು ಹೊಂದಿ ಕೃಷಿಯ ಯಾವ ಹಿನ್ನೆಲೆಯಿಲ್ಲದಿದ್ದರೂ, ಗಾಂಧೀ ತತ್ವದ ಅನುಷ್ಠಾನ ಮಾಡಲು ಮಾನಸಿಕವಾಗಿ ಸಿದ್ಧರಾದರು. ೧೯೫೦ನೇ ಸುಮಾರಿಗೆ ಉಡುಪಿ ಜಿಲ್ಲೆಯ ಆರೂರಿನಲ್ಲಿ ಅವರ ಭಾವನ ಹತ್ತಿರವಿದ್ದ ಕೃಷಿಗೆ ಯೋಗ್ಯವಲ್ಲದ ಮಳೆ ನೀರಾಧಾರಿತ ಎರಡೆಕರೆ ಬಂಜರು ಗುಡ್ಡ ಭೂಮಿಯನ್ನು ಮೂಲಗೇಣಿ ಆಧಾರದಲ್ಲಿ ಪಡೆಯುವಲ್ಲಿ ಯಶಸ್ವಿಯಾದರು. ಅದನ್ನು ತನ್ನ ಕರ್ಮಭೂಮಿಯನ್ನಾಗಿಸಿಕೊಂಡು ಖಾದಿ ನೇಯುವ ವೃತ್ತಿಯ ಜೊತೆಗೆ ಈ ಬಂಜರು ಭೂಮಿಯಲ್ಲಿ ಜೀವನಾವಶ್ಯಕ ಭತ್ತ ಬೆಳೆದು ಬಟ್ಟೆಯ ಜೊತೆ ಅನ್ನ ಸ್ವಾವಲಂಬನೆಯ ಕನಸನ್ನು ನನಸಾಗಿಸಲು ಅಣಿಯಾದರು. ಆರಂಭದ ದಿನಗಳಲ್ಲಿ ಪ್ರಕೃತಿಯ ಒಡನಾಟವಿಲ್ಲದ ರಾಯರಿಗೆ ಹಲವಾರು ಸಮಸ್ಯೆಗಳು ಎದುರಾದರೂ ಸಹಾ ಹತ್ತು ವರ್ಷಗಳ ಸತತ ಪ್ರಯತ್ನದಿಂದ ಒಣ ಭೂ ಮಿಯಲ್ಲಿ ಕೇವಲ ಬಿದ್ದ ಮಳೆನೀರಿನ ಆಧಾರದಲ್ಲಿ ಅತ್ಯುತ್ತಮ ಫಸಲು ನೀಡುವ ಭತ್ತದ ಬೇಸಾಯ ಪದ್ಧತಿಯನ್ನು ಆವಿಷ್ಕರಿಸಿ, ಅದಕ್ಕೆ 'ಸರ್ವೋದಯ ಪದ್ಧತಿ' ಭತ್ತದ ಕೃಷಿ ಪದ್ಧತಿಯೆಂದು ಹೆಸರಿಸಿ ಯಶಸ್ಸನ್ನು ಕಂಡುಕೊಂಡರು. ಅರವತ್ತರ ದಶಕದ ಹಸಿರು ಕ್ರಾಂತಿಯ ಸಮಯದಲ್ಲಿ ರಾಯರ ಸಾಧನೆ ಭತ್ತ ಬೆಳೆಯುವುದರಲ್ಲಿ ಹೊಸ ಕ್ರಾಂತಿಯೆಂದೇ ಪರಿಗಣಿಸಲ್ಪಟ್ಟಿತ್ತು. ಇವರ ಸ್ವಾವಲಂಬನೆಯ ಕೃಷಿ ಪದ್ಧತಿಯು ಇಡೀ ದೇಶಕ್ಕೇ ಮಾದರಿ. ಆದರೆ

ನಮ್ಮ ಪ್ರಜಾಪ್ರಭುತ್ವದ ವಿಪರ್ಯಾಸವೆಂದರೆ, ನಲವತ್ತು ವರ್ಷಗಳ ನಂತರ, ಅರ್ಜಿ ಸಲ್ಲಿಸಿದ ಮೇಲೆ ಕರ್ನಾಟಕ ಸರಕಾರದ ಕೃಷಿ ಇಲಾಖೆಯವರು ಗುರುತಿಸಿ, 'ಕೃಷಿ ಪಂಡಿತ' ಪ್ರಶಸ್ತಿಗೆ ಆಯ್ಕೆ ಮಾಡಿ, ಅದನ್ನು ಪಡೆಯಲು ಎರಡು ವರ್ಷಗಳ ಕಾಲ ಕಾಯಬೇಕಾಯಿತು.

ಅವರ ಗಾಂಧೀ ತತ್ವ ಪ್ರೇರಿತ ಕೆಲಸ, ಹೋರಾಟ, ಸರಳ ಸ್ವಾವಲಂಬಿ ಜೀವನ ಪದ್ಧತಿ ಎಲ್ಲರಿಗೂ ಅದರಲ್ಲೂ ಸಣ್ಣ ರೈತರಿಗೂ, ಯುವಕರಿಗೂ ಆದರ್ಶಪ್ರಾಯ, ಹಳ್ಳಿಯಲ್ಲಿ ನಿಸರ್ಗದೊಂದಿಗೆ ಬದುಕಲು ಅಸಾಧ್ಯವೆಂದು ನಗರಕ್ಕೆ ವಲಸೆ ಹೋಗುವ ಯುವಕರಿಗೆ ಅತ್ಯುತ್ತಮ ಮಾರ್ಗದರ್ಶನ. ಬಂಜರು ಭೂಮಿಯಲ್ಲಿ ತನ್ನ ಸಂಸಾರಕ್ಕೆ ಅಗತ್ಯವಿರುವ ಬಹುಪಾಲು ವಸ್ತುಗಳನ್ನು ಉತ್ಪಾದಿಸಿ ಅದನ್ನು ನಂದನವನವನ್ನಾಗಿ ಪರಿವರ್ತಿಸಿದ ಅವರ ತೋಟವನ್ನು ಲಕ್ಷಾಂತರ ಜನ ಸಂದರ್ಶಿಸಿ ಪ್ರಭಾವಿತರಾಗಿದ್ದಾರೆ. ತೊಂಭತ್ತರ ಹರೆಯದ ರಾಯರು ಈಗಲೂ ಅವರ ತೋಟವನ್ನು ನೋಡಲು ಬರುವ ಜನರಿಗೆ ಹದಿಹರೆಯದ ಉತ್ಸಾಹದಿಂದ ಸಾರ್ಥಕ ಬದುಕನ್ನು ಭೂಮಿತಾಯಿಯಲ್ಲಿ ಕಂಡುಕೊಳ್ಳಲು ಪ್ರೇರಕ ಶಕ್ತಿಯನ್ನು ತುಂಬುತ್ತಿದ್ದಾರೆ.

ತನಗೆ ದೇಹದಲ್ಲಿ ದುಡಿಯುವ ಶಕ್ತಿ ಕುಂದಿದ ಮೇಲೂ ಜೀವನ ನಿರ್ವಹಣೆಗೆ, ಪಿಂಚಣಿ ವ್ಯವಸ್ಥೆಯನ್ನು ಪ್ರಕೃತಿಯಿಂದಲೇ ಪಡೆಯುವ ದೂರದರ್ಶಿತ್ವ ಹೊಂದಿದ ಅದ್ಭುತ ವ್ಯಕ್ತಿತ್ವ ಇವರದು. ತಾನು ಸಂತೋಷ, ನೆಮ್ಮದಿಯಿಂದ ಬದುಕಿ ಇತರರೂ ತನ್ನಂತೆ ಸುಖ ಸಂತೋಷದಲ್ಲಿ ಬದುಕಬೇಕೆನ್ನುವ ಉನ್ನತ ಆದರ್ಶಗಳನ್ನು ರೂಢಿಸಿಕೊಂಡವರು. ಇಳಿವಯಸ್ಸಿನಲ್ಲಿಯೂ ತನ್ನ ಅನುಭವಗಳನ್ನು ಹಂಚಿಕೊಳ್ಳುವ, ಕೇಳಿದವರಿಗೆ ಸೂಕ್ತ ಸಲಹೆ ಮಾರ್ಗದರ್ಶನಗಳನ್ನು ನೀಡುವುದರಲ್ಲಿ ಅನನ್ಯ ತೃಪ್ತಿ ಕಾಣುವ ಇವರ ಮನೋಭಾವ ಖಂಡಿತ ಅನುಕರಣೀಯ.

ಇಡೀ ಮನುಕುಲಕ್ಕೆ ದಾರಿದೀಪವಾಗಿದ್ದ ಹಾಗೂ ಅವರು ತೋರಿಸಿದ ದಾರಿಯಲ್ಲಿ ಸಾಗಿದರೆ ನಿಸ್ಸಂಶಯವಾಗಿ ನೆಮ್ಮದಿ, ಸೌಹಾರ್ದ, ಪ್ರೀತಿಯಿಂದ ಬದುಕಲು ಸಾಧ್ಯವಿರುವದನ್ನು ತನ್ನ ಕೃತಿಯಿಂದಲೇ ತೋರಿಸಿದ ಮಹಾತ್ಮನನ್ನು ಈಗಿನ ಯಂತ್ರಯುಗದಲ್ಲಿ ಯಂತ್ರದಂತೆ ಪಾಶ್ಚಾತ್ಯರನ್ನು ಹೆಮ್ಮೆಯಿಂದ ಅನುಕರಿಸಿ ಅರ್ಥಹೀನ ಬದುಕು ಸಾಗಿಸುತ್ತಿರುವ ನಮ್ಮ ದೇಶದಲ್ಲಿ ಅಕ್ಟೋಬರ್ ಎರಡರಂದು ಸ್ವಲ್ಪ ಜನ ಮತ್ತು ಜನವರಿ ಮೂವತ್ತರಂದು ಕೆಲವೇ ಜನ ನೆನಪಿಸಿಕೊಳ್ಳುವ ಹಂತಕ್ಕೆ ತಲುಪಿದ್ದೇವೆ. ಸರಕಾರ ಮತ್ತು ಖಾದಿ ಗ್ರಾಮೋದ್ಯೋಗ ಮಂಡಳಿಯವರು ಈ ಸಂದರ್ಭದಲ್ಲಿ ಎರಡು ತಿಂಗಳು ರಿಯಾಯಿತಿ ದರದಲ್ಲಿ ಖಾದಿ ಬಟ್ಟೆ ಮಾರಾಟಮಾಡಿ ಗಾಂಧೀಜಿಯವರಿಗೆ ಕೊಡುವ ಅಮೂಲ್ಯ ಮರ್ಯಾದೆಯೆಂದೆ ಸಂತಸ ಪಟ್ಟುಕೊಳ್ಳುತ್ತಾರೆ. ಈ ಕಾರ್ಯಕ್ರಮ ಕೂಡಾ ಈಗ ಬಹು ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುತ್ತಿಲ್ಲ. ಈ ಅಶಾಂತರ ನಡುವೆ ಚೇರ್ಕಾಡಿಯಂತಹವರ ಬದುಕು ಮುಂದಿನ ತಲೆಮಾರಿಗೆ ಮಾರ್ಗದರ್ಶನ. ಗಾಂಧಿಯವರನ್ನೇ ಮರೆತ ಜನರಿಗೆ ಉಳಿದವರೆಲ್ಲ ಯಾವ ಲೆಕ್ಕ?

* * *

ಜನಪದ ವ್ಯಕ್ತಿ

ಎಚ್.ಐ.ವಿ. ಬಾಧಿತರಿಗೆ ಮಿಡಿದ ವೀಣಾ

- ಬಿ.ಎಂ.ವೀಣಾ

ನಾನು ವೀಣಾಧರಿಯನ್ನು ಮೊದಲು ಭೇಟಿಯಾಗಿದ್ದು ರವಿ ಬೆಳೆಗೆರೆಯವರ 'ಹಾಯ್ ಬೆಂಗಳೂರು' ಪತ್ರಿಕೆಯ ಕಚೇರಿಯಲ್ಲಿ. ಆಕೆ ಮೊದಲ ನೋಟಕ್ಕೆ ಇಷ್ಟವಾಗಿಬಿಡುವ, ಮೊದಲ ಮಾತಿನಲ್ಲೇ ಆತ್ಮೀಯಳಾಗುವಂತಹವಳಾಗಿದ್ದಳು. ಮೊದಲ ಭೇಟಿಯಲ್ಲೇ ನಾವಿಬ್ಬರೂ ಸ್ನೇಹಿತರಂತಾದೆವು.

ರವಿ ಬೆಳೆಗೆರೆಯವರು 'ಪ್ರತಿ ಭಾನುವಾರ ವೀಣಕ್ಕ ಎಚ್‌ಐವಿ ಬಾಧಿತರಿಗಾಗಿ ಆಪ್ತ ಸಮಾಲೋಚನೆ ನಡೆಸುವಳೆಂದು' ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಅದಕ್ಕಾಗಿ ತಮ್ಮ ಪ್ರಾರ್ಥನಾ ಶಾಲೆಯಲ್ಲಿ ಒಂದು ಕೊಠಡಿಯನ್ನು ಸಹ ಬಿಟ್ಟುಕೊಟ್ಟಿದ್ದರು.

ನಾನು ಸುಮಾರು ಎರಡು ವರ್ಷಗಳ ಕಾಲ ವೀಣಾ ನಡೆಸುತ್ತಿದ್ದ ಆಪ್ತ ಸಮಾಲೋಚನೆಯಲ್ಲಿ ಅವಳ ಜತೆ ಭಾಗವಹಿಸುತ್ತಿದ್ದೆ. ಅವಳಿಂದ ಸಾಂತ್ವನ ಪಡೆಯಲು ದೂರ ದೂರದ ಊರುಗಳಿಂದ ಎಚ್‌ಐವಿ ಬಾಧಿತರು ಬರುತ್ತಿದ್ದರು. ಅವರನ್ನು ಎದುರುಗೊಳ್ಳುತ್ತಿದ್ದ ರೀತಿ, ಅವರ ಹಲವಾರು ಅನುಮಾನಗಳಿಗೆ ಆಕೆ ಉತ್ತರಿಸುತ್ತಿದ್ದ ರೀತಿ, ಅವರಿಗೆ ಊಟೋಪಚಾರದ ಬಗ್ಗೆ, ಮನೆ ಮದ್ದಿನ ಬಗ್ಗೆ ನೀಡುತ್ತಿದ್ದ ಮಾಹಿತಿ, ಪ್ರತಿಯೊಂದರಲ್ಲೂ ಅತೀವ ಕಾಳಜಿಯಿರುತ್ತಿತ್ತು. ಬೆಳಗ್ಗೆ ೧೦-೩೦ಕ್ಕೆ ಪ್ರಾರಂಭವಾಗುತ್ತಿದ್ದ ಆಪ್ತ ಸಮಾಲೋಚನೆ ಸಂಜೆ ೬-೭ ಗಂಟೆಯವರೆಗೆ ಕೆಲವೊಮ್ಮೆ ೯ ಗಂಟೆಯವರೆಗೂ ನಡೆದಿದ್ದಿದೆ. ಪ್ರತಿಯೊಬ್ಬರ ಬಳಿಯೂ ಹೇಳಿದ ವಿಷಯವನ್ನು ಮತ್ತೆ ಮತ್ತೆ ಹೇಳ ಬೇಕಾಗುತ್ತಿತ್ತು. ಮಾತನಾಡಿದ್ದನ್ನೇ ಮಾತನಾಡ ಬೇಕಾಗುತ್ತಿತ್ತು. ಆದರೂ ಎಂದೂ ಸಹನೆ ಕಳೆದುಕೊಳ್ಳದಂತಹ ವ್ಯಕ್ತಿತ್ವದವಳು. ಅವಳಿಗೆ ಅಷ್ಟು ತಾಳ್ಮೆ, ಅಂತಹ ಶಕ್ತಿ ಎಲ್ಲಿಂದ ಬರುತ್ತಿತ್ತು ಎಂದು ಆಶ್ಚರ್ಯವಾಗುತ್ತಿತ್ತು.

ಆಪ್ತ ಸಮಾಲೋಚನೆಗಾಗಿ ಬಂದವರು ಎಷ್ಟೋ ಬಾರಿ ಗಂಟೆಗಟ್ಟಲೆ ಅಳುತ್ತಿದ್ದರು. ಇನ್ನಿಲ್ಲದಂತೆ ರೋದಿಸುತ್ತಿದ್ದರು. ಸಾಯ ಬೇಕೆಂದು ಬಯಸುತ್ತಿದ್ದರು. ಅಂತಹವರನ್ನೆಲ್ಲ ತನ್ನ ತೋಳ ತೆಕ್ಕೆಗೆಳೆದುಕೊಂಡು ಸಾಂತ್ವನ ನೀಡಿ, ಅವರು ಅತ್ತು ಹಗುರಾಗುವಂತೆ ಮಾಡುತ್ತಿದ್ದಳು. ಅವಳ ಪ್ರೀತಿ, ವಿಶ್ವಾಸ, ಆತ್ಮೀಯತೆಗೆ ಸೋತು, ಅಳುತ್ತ ಬಂದವರು ನಗುತ್ತಾ ಹೋಗುತ್ತಿದ್ದರು. ಆಗ ಅವಳು ಅನುಭವಿಸುತ್ತಿದ್ದ ಧನ್ಯತಾ ಭಾವವಿರುತ್ತಿತ್ತಲ್ಲ ಅದನ್ನು ವರ್ಣಿಸಲು ಸಾಧ್ಯವೇ ಇಲ್ಲ.

ಸಮಾಜದಲ್ಲಿ ಪ್ರಚಲಿತವಿದ್ದ ವಿಷಯವೆಂದರೆ, 'ಎಚ್‌ಐವಿ ಎಂದರೆ ಏಡ್ಸ್. ಏಡ್ಸ್ ಎಂದರೆ ಸಾವು. ಇದೊಂದು ಭಯಂಕರ ಲೈಂಗಿಕ ರೋಗ. ಮಹಾಮಾರಿ! ಇದರ ಹರಡುವಿಕೆಗೆ ದಾರಿಗಳು ಹಲವು' ಎಂಬುದಾಗಿತ್ತು. ನಾನು ಕೂಡ ಅದನ್ನು ನಿಜವೆಂದೇ ನಂಬಿದ್ದೆ. ಆದರೆ ವೀಣಾಳ ಪರಿಚಯವಾದದ್ದೇ, ನನ್ನ ನಂಬಿಕೆಯ ಬಗ್ಗೆ ನನಗೇ

ಮುಜುಗರವಾಗುವಂತಾಯಿತು. ವಿದ್ಯಾವಂತಳಾದ ನಾನು ಕೂಡ ಇದನ್ನು ವಿವೇಚಿಸದೆ ನಂಬಿದ್ದೆನಲ್ಲ ಎಂದುಕೊಳ್ಳುವಂತಾಗಿತ್ತು. ಆಪ್ತ ಸಮಾಲೋಚನೆಯ ಒಂದೊಂದು ಭಾನುವಾರವೂ ನನ್ನನ್ನು ಹೆಚ್ಚು ಹೆಚ್ಚು ಆ ಬಗ್ಗೆ ತಿಳಿಯುವಂತೆ ಮಾಡುತ್ತಾ ಹೋಯಿತು.

ವೀಣಾ, ತಾನು ಎಚ್‌ಐವಿ ಬಾಧಿತಳೆಂದು ತಿಳಿದಾಗ ಅತ್ತದ್ದಿದೆ, ಗೋಳಾಡಿದ್ದಿದೆ, ಸಾವನ್ನು ಬಯಸಿದ್ದಿದೆ. ಆದರೆ ಅದನ್ನೆಲ್ಲ ಮೆಟ್ಟಿನಿಂತಳು. ಅದರ ಬಗ್ಗೆ ಸರಿಯಾಗಿ ತಿಳಿದುಕೊಳ್ಳಬೇಕೆಂದು ಹಟ ತೊಟ್ಟು ಹೊರಟಳು. ಎಚ್‌ಐವಿ ಬಗ್ಗೆ ದೀರ್ಘವಾದ ಅಧ್ಯಯನ, ವಿಜ್ಞಾನಿಗಳು ಸಂಶೋಧಕರ ಜತೆ ಚರ್ಚೆ, ವಿಚಾರ ವಿನಿಮಯ, ಬಾಧಿತರ ಭೇಟಿ, ಅವರ ದುಃಖ ದುಮ್ಮಾನಗಳು, ಸಮಸ್ಯೆಗಳು, ಕುಟುಂಬದವರ ವರ್ತನೆ, ಆಸ್ಪತ್ರೆಗಳಲ್ಲಿ ತೋರುತ್ತಿದ್ದ ನಿರ್ಲಕ್ಷ್ಯ, ಅಸ್ಪೃಶ್ಯತೆ ಇವುಗಳನ್ನೆಲ್ಲ ತಿಳಿದುಕೊಂಡಳು. ತಾನು ಅನುಭವಿಸಿದ ನೋವು ಅವಮಾನಗಳಿಂದ ಹೊರಬಂದು, ಎಚ್‌ಐವಿ ಬಾಧಿತರಿಗಾಗಿ ಬದುಕಬೇಕು. ಅವರಲ್ಲಿ ಆತ್ಮವಿಶ್ವಾಸ ತುಂಬಬೇಕು. ಅವರಲ್ಲಿ ಬದುಕುವ ಆಸೆಯನ್ನು ಹುಟ್ಟುಹಾಕಬೇಕು ಎಂದು ಛಲ ತೊಟ್ಟು ಹಗಲು ರಾತ್ರಿ ದುಡಿಯತೊಡಗಿದಳು. ವೀಣಾಳ ಕೂಗು ನಿಧಾನವಾಗಿ ಜನರನ್ನು ತಲುಪತೊಡಗಿತು.

ಆಕೆಗೆ ಎಚ್‌ಐವಿ/ಏಡ್ಸ್ ಪರೀಕ್ಷೆಗಳು, ಕಾಂಡೋಮ್ ಎಆರ್‌ಟಿ ಮುಂತಾದವುಗಳ ಪ್ರಚಾರ ಕಾರ್ಯಕ್ರಮಗಳ ಬಗ್ಗೆ ಅತಿಯಾದ ಕೋಪವಿತ್ತು. ಅಗತ್ಯವಿದ್ದಾಗೆಲ್ಲ ಅವುಗಳನ್ನು ಪ್ರತಿಭಟಿಸುತ್ತಿದ್ದಳು. ಅವಳ ಪ್ರಕಾರ ಇದು ಬರೀ ಆರೋಗ್ಯ ಸಮಸ್ಯೆಯಲ್ಲ ಎನಿಸಿತ್ತು. ಆಳವಾಗಿ ಅಧ್ಯಯನ ಮಾಡಿದುದರ ಫಲವಾಗಿ ಇದೊಂದು ಬೃಹತ್, ವೈದ್ಯಕೀಯ ಮಾಫಿಯಾ ಜಾಲ. ಇದು ಒಂದು ಉದ್ದಿಮೆಯಾಗಿ, ಬೃಹದಾಕಾರವಾಗಿ ಬೆಳೆದು ನಿಂತಿದೆ. ಮುಗ್ಧರನ್ನು ಬಲಿ ತೆಗೆದುಕೊಳ್ಳುತ್ತಿದೆ ಎಂಬುದನ್ನು ಅರಿತಳು. ಸರಿ ಹೋರಾಟ ಪ್ರಾರಂಭವಾಯಿತು.

ಈ ಉದ್ದಿಮೆಯು ಉದ್ದೇಶಪೂರ್ವಕವಾಗಿ ಈ ಸಮಸ್ಯೆಯನ್ನು ಹುಟ್ಟುಹಾಕಿದೆ ಎಂದು ಆಕೆ ಹೇಳುತ್ತಿದ್ದಳು. ಎಚ್‌ಐವಿ/ಏಡ್ಸ್ ಉದ್ದಿಮೆಯು ಸಾವಿರಾರು ಅಮಾಯಕರ ಜೀವನವನ್ನು, ಬದುಕನ್ನು, ನೆಮ್ಮದಿಯನ್ನು ಕಿತ್ತುಕೊಂಡಿದೆ ಎಂಬುದು ಆಕೆಯ ಅಭಿಪ್ರಾಯ. ಎಚ್‌ಐವಿ ಸಂಕೇತವಾದ 'ರೆಡ್ ರಿಬ್ಬನ್' ಬಗ್ಗೆಯಂತೂ ಆಕ್ರೋಶ ವ್ಯಕ್ತಪಡಿಸುತ್ತಿದ್ದಳು. ಕಳೆದ ಅಕ್ಟೋಬರ್ ೨ರಂದು ವಿಧಾನಸೌಧದ ಮುಂದೆ ಅದನ್ನು ಕತ್ತರಿಸಿ ಹಾಕುವುದರ ಮೂಲಕ ಪ್ರತಿಭಟಿಸಿದಳು. ಮೊದಮೊದಲು ಏಡ್ಸ್ ಬಂದವರು ೫-೬ ತಿಂಗಳಲ್ಲಿ ಸಾಯುತ್ತಾರೆ ಎನ್ನುತ್ತಿದ್ದರು. ನಂತರ ೧-೨ ವರ್ಷಗಳಲ್ಲಿ ಸಾಯುತ್ತಾರೆ ಎನ್ನುತ್ತಿದ್ದರು. ಅನಂತರ ಐದಾರು ವರ್ಷಗಳ ಕಾಲ ಬದುಕುತ್ತಾರೆ ಎನ್ನುತ್ತಿದ್ದರು.

ಇತ್ತೀಚೆಗೆ ೩೦ ರಿಂದ ೩೫ ರ ವರೆಗೆ ಬದುಕಬಹುದು ಎನ್ನುತ್ತಿದ್ದಾರೆ. ವೀಣಾ ಇಂತಹ ಅನೇಕ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ್ದಾಳೆ. ಎಚ್‌ಐವಿ ಮತ್ತು ಏಡ್ಸ್ ಒಂದೇ ಎಂಬಂತೆ ಪ್ರಚಾರ ಮಾಡುತ್ತಿದ್ದ ಇದರ ಪ್ರಚಾರಕರು ಈಗ ಅವೆರಡು ಭಿನ್ನ ಎನ್ನತೊಡಗಿದ್ದಾರೆ. 'ಎಚ್‌ಐವಿ ಅಂದರೆ ಏಡ್ಸ್, ಏಡ್ಸ್ ಅಂದರೆ ಸಾವು' ಅನ್ನುತ್ತಿದ್ದವರು ಈಗ ಹಾಗಲ್ಲ

ಎನ್ನುತ್ತಿದ್ದಾರೆ. ಇದು ವೀಣಾಳ ಹೋರಾಟದಿಂದಾದ ಸೂಕ್ಷ್ಮ ಸಂಚಲನ ಎನ್ನಬಹುದು.

ಮೊದಲು ಎಚ್‌ಐವಿ ಒಬ್ಬರಿಂದ ಒಬ್ಬರಿಗೆ ಹರಡುವ ರೋಗ ಎನ್ನಲಾಗುತ್ತಿದ್ದು, ಈಗ ಹಾಗಲ್ಲ ಎನ್ನುತ್ತಿದ್ದಾರೆ. ಎಚ್‌ಐವಿ ಬಾಧಿತಳಾದ ತಾಯಿ ಮಗುವಿಗೆ ಮೊಲೆಹಾಲು ಕುಡಿಸಬಾರದು ಎನ್ನುತ್ತಿದ್ದರು. ಈಗ ಕುಡಿಸಿದರೆ ತೊಂದರೆಯಿಲ್ಲ ಎನ್ನುತ್ತಿದ್ದಾರೆ. ಎಚ್‌ಐವಿ ಬಾಧಿತರಿಗೆ ಅವಕಾಶವಾದಿ ಸೋಂಕುಗಳು ಬಾಧಿಸಿ ಬೇಗ ಏಡ್ಸ್ ಹಂತ ತಲುಪುತ್ತಾರೆ ಎನ್ನುತ್ತಿದ್ದವರು ಈಗ ಸೋಂಕಿಗೆ ಔಷಧೋಪಚಾರ ಮಾಡಿದರೆ ಸಾಕು ಎನ್ನುತ್ತಿದ್ದಾರೆ.

ಸಾಮಾನ್ಯವಾಗಿ ಎಚ್‌ಐವಿ ಬಾಧಿತರು ನಿಯಮಿತವಾಗಿ ಎಆರ್‌ಟಿಯನ್ನು ತೆಗೆದುಕೊಳ್ಳಬೇಕೆಂದು ಹೇಳಲಾಗುತ್ತಿತ್ತು. ಆದರೆ ಇತ್ತೀಚೆಗೆ ಇದು ದುಷ್ಪರಿಣಾಮವನ್ನುಂಟು ಮಾಡುತ್ತದೆ ಎಂದು ಹೇಳುತ್ತಿದ್ದಾರೆ. ಹಿಂದೆ ಏಡ್ಸ್‌ಗೆ ಎಚ್‌ಐವಿ ಕಾರಣ ಎನ್ನಲಾಗುತ್ತಿದ್ದುದು ಇತ್ತೀಚೆಗೆ ವ್ಯಕ್ತಿಗಳಲ್ಲಿರುವ ಕುಡಿತ, ದುಶ್ಚಟಗಳು, ವಂಶ ಪಾರಂಪರ್ಯವಾಗಿ ಬರುವ ಕಾಯಿಲೆಗಳು, ನ್ಯೂನ ಪೋಷಣೆ ಮುಂತಾದವುಗಳು ಕಾರಣವೆಂದು ತಿಳಿಸುತ್ತಿದ್ದಾರೆ. ಎಚ್‌ಐವಿ ಪರೀಕ್ಷೆಗಾಗಿ ಇರುವ ಕಿಟ್ ಕೂಡ ವಿಶ್ವಾಸಾರ್ಹವಲ್ಲ ಎಂಬುದಾಗಿ ಹೇಳಲಾಗುತ್ತಿದೆ. ಇದೆಲ್ಲವೂ ಕಾಲಕ್ರಮೇಣ ಬದಲಾದ ಅಭಿಪ್ರಾಯಗಳು. ಇಂತಹುಗಳ ಬಗ್ಗೆಯೆಲ್ಲ ವೀಣಾ ಹಂತ ಹಂತವಾಗಿ ಹೋರಾಟ ಮಾಡಿದ್ದಾಳೆ. ಅನೇಕ ಸುಳ್ಳುಗಳನ್ನು ಬಯಲಿಗೆಳೆದಿದ್ದಾಳೆ. ಇದಕ್ಕಾಗಿ ಆಕೆ ಪಟ್ಟ ಶ್ರಮ, ನಡೆಸಿದ ಹೋರಾಟ ಕಡಿಮೆಯದೇನಲ್ಲ. ಬಹುಶಃ ಹೆಚ್ಚಿನ ಸಂದರ್ಭದಲ್ಲಿ 'ಏಕಾಂಗಿ'ಯಾಗಿಯೇ ಧ್ವನಿಯೆತ್ತಿದ್ದಾಳೆ ಎಂಬುದು ಸತ್ಯ.

ತಾನು ಕಂಡುಕೊಂಡ ಸತ್ಯವನ್ನು ಜನರಿಗೆ ತಲುಪಿಸುವುದು ವೀಣಾಳಿಗೆ ಬೇಕಾಗಿತ್ತು. ಬಹುಶಃ ಇದಕ್ಕೆ ನೆರವಾದುದು 'ವಿಜಯ ಕರ್ನಾಟಕ' ಪತ್ರಿಕೆ. ಬಾಧಿತರಿಗೆ ಇರುವ ನೋವು, ಸಂದೇಹಗಳು ಮುಂತಾದವುಗಳಿಗೆ ಪ್ರಶ್ನೋತ್ತರ ರೂಪದಲ್ಲಿ ಪ್ರತಿವಾರವೂ ಸತ್ಯವನ್ನು ಎಳೆಎಳೆಯಾಗಿ ಬಿಡಿಸಿಡುತ್ತಾ ಹೋದಳು. ಆ ಮೂಲಕ ಹೆಚ್ಚು ಹೆಚ್ಚು ಜನರನ್ನು ತಲುಪಿದಳು. ಮುಖ್ಯವಾಗಿ ಅದು ನೊಂದವರಿಗೆ, ಧೈರ್ಯ ಸಾಂತ್ವನ ಹೇಳುವ ಮಾರ್ಗವಾದರೂ ಇತರರೂ, ವಿದ್ಯಾವಂತರೂ ಒಮ್ಮೆ ಯೋಚಿಸುವಂತೆ ಮಾಡಿತು. ಅವರಲ್ಲಿ ಕುತೂಹಲವನ್ನು ಕೆರಳಿಸಿತು. ಪ್ರಶ್ನಿಸುವ ಮನೋಭಾವನೆಯನ್ನು ಹುಟ್ಟುಹಾಕಿತ್ತು. ಜನರಲ್ಲಿ ವಿಷಯ ತಿಳಿಯುವ ಕಾಳಜಿಯನ್ನು ಬೆಳೆಸಿತೆಂದೇ ಹೇಳಬಹುದು.

ಅನಂತರ ವೀಣಾಳನ್ನು ಹುಡುಕಿ ಬರುವ ಬಾಧಿತರ ಜತೆ, ಇತರರೂ ವಿಷಯದ ತಿಳಿವಳಿಕೆಗಾಗಿ ಬರತೊಡಗಿದರು. ಅವಳ ಜತೆ ಕೆಲಸ ಮಾಡುವ ಅಪೇಕ್ಷೆಯನ್ನು ವ್ಯಕ್ತಪಡಿಸತೊಡಗಿದರು. ಬಾಧಿತರಲ್ಲಿ ಎಆರ್ಟಿ ಬಗ್ಗೆ ಜಾಗೃತಿ ಮೂಡಿ ಅದನ್ನು ತೆಗೆದುಕೊಳ್ಳದೇ ಇರುವ ನಿರ್ಧಾರ ಬಲಿಯಿತು. ತಮ್ಮ ದಿನನಿತ್ಯದ ಊಟೋಪಚಾರಗಳ ಮೂಲಕವೇ, ಆರೋಗ್ಯವನ್ನು ಕಾಪಾಡಿಕೊಳ್ಳುವ ಪ್ರಯತ್ನ ಮಾಡತೊಡಗಿದರು. ಅವಳ ಸಾಂತ್ವನದಿಂದ ಬದುಕಿನಲ್ಲಿ ಭರವಸೆ ಮೂಡಿಸಿಕೊಳ್ಳತೊಡಗಿದರು. ಸಮಾಜದಲ್ಲಿ ಬದುಕಬೇಕು, ಬದುಕಿ ತೋರಿಸಬೇಕು ಎಂಬ ದೃಢ ನಿಲುವನ್ನು ತಳೆಯತೊಡಗಿದರು.

ಇವೆಲ್ಲದರ ಹಿಂದೆ ವೀಣಾಳ ಕಾಳಜಿ, ತಾಯ ಮಮತೆ, ತಾಳ್ಮೆ, ಶ್ರಮ ತುಂಬ ಕೆಲಸ ಮಾಡಿದೆ.

ಮುಂದೊಂದು ದಿನ ಎಚ್‌ಐವಿ ಅನ್ನುವುದು ರೋಗವೇ ಅಲ್ಲ ಅನ್ನುವುದನ್ನು ಪ್ರಮಾಣಿಸಿ ತೋರಿಸುತ್ತೇನೆ ಎನ್ನುತ್ತಿದ್ದ ವೀಣಾಗೆ, ತಾನು ಎಚ್‌ಐವಿ ಬಾಧಿತರಿಗೆ ಬರೀ ಆಪ್ತ ಸಮಾಲೋಚನೆ ಮಾಡುವುದಷ್ಟಕ್ಕೇ ಸೀಮಿತವಾಗಬಾರದು, ಬೇರೆ ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬ ಯೋಚನೆಯಿತ್ತು. ಎಚ್‌ಐವಿ ಬಾಧಿತರಿಗಾಗಿ ಒಂದು ಪುಟ್ಟ ವಸತಿಗೃಹವನ್ನು ತೆಗೆಯಬೇಕು. ಅದು ಆಸ್ಪತ್ರೆಯಂತಿರದೆ, ಆಶ್ರಮದಂತತಿರಬೇಕೆಂಬುದು ಆಕೆಯ ಕನಸಾಗಿತ್ತು. ಸುಮಾರು ೧೦-೧೫ ಬಾಧಿತರು ಒಂದು ವಾರ ಕಾಲ ಅಲ್ಲಿ ತಂಗಬೇಕು. ಅವರಿಗೆ ಎಲ್ಲ ರೀತಿಯ ಸಲಹೆ, ಸಾಂತ್ವನ, ಅನುಸರಿಸಬೇಕಾದ ಊಟೋಪಚಾರಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಬಯಸಿದ್ದಳು. ವಸತಿಗೃಹದ ಸುತ್ತಲೂ ಜಾಗವಿರಬೇಕು. ಅಲ್ಲಿ ಔಷಧೀಯ ಸಸ್ಯಗಳನ್ನು ಬೆಳಸಬೇಕು. ಅವುಗಳ ಉಪಯೋಗದ ಬಗ್ಗೆ ಬಾಧಿತರಿಗೆ ತಿಳಿಸಿಕೊಡಬೇಕು. ತಿಂಗಳಿಗೊಂದು ಸಾರಿ ಶಿಬಿರ ನಡೆಸಬೇಕು. ಬೇರೆ ಬೇರೆ ಊರುಗಳಿಂದ ಬಾಧಿತರು ಪರಸ್ಪರ ಪರಿಚಯ, ದುಃಖ ನಿವೇದನೆ ಮಾಡಿಕೊಂಡು ಸಮಾಧಾನ ಪಟ್ಟುಕೊಳ್ಳಬೇಕೆಂಬುದು ಅವಳ ಆಸೆಯಾಗಿತ್ತು.

ವಿವಿಧ ಊರುಗಳಲ್ಲಿರುವ ಬಾಧಿತರ ನೋವು, ಸಂಕಟಗಳ ಬಗ್ಗೆ ಮಾಹಿತಿ ಪಡೆದು, ಅದರ ಬಗ್ಗೆ ಸಂಶೋಧನೆ ನಡೆಸಿ, ಅವರಿಗೆ ಉಪಯೋಗ ಆಗುವಂತಹದ್ದೇನಾದರೂ ಮಾಡಬಯಸಿದ್ದಳು. ಎಚ್‌ಐವಿ ಬಾಧಿತರ ಬಗೆಗಿನ ವಿಷಯ ಸಂಗ್ರಹಣೆಗಾಗಿ ಒಂದು ಪ್ರಶ್ನಾವಳಿಯನ್ನು ಕೂಡ ಸಿದ್ಧಪಡಿಸಿದ್ದಳು. ಅವರಿಗೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ-ಯಾವುದೇ ಪ್ರತ್ಯೇಕತೆಯಿಲ್ಲದೆ ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂದು ಬಯಸಿದ್ದಳು. ೨-೩ ವರ್ಷಗಳ ಕಾಲ ಈ ಬಗ್ಗೆ ಕೆಲಸ ಮಾಡಿ ಒಂದು ಹಂತಕ್ಕೆ ತಂದು ನಿಲ್ಲಿಸುತ್ತೇನೆಂದು ಹೇಳುತ್ತಿದ್ದಳು. ಎಚ್‌ಐವಿ ಬಾಧಿತರಿಗೆ ಅಷ್ಟರಲ್ಲಿ ಸ್ವಲ್ಪ ತಿಳುವಳಿಕೆ ಮೂಡಿರುತ್ತೆ. ತಮ್ಮನ್ನು ತಾವು ನೋಡಿಕೊಳ್ಳಬಲ್ಲ ಆತ್ಮವಿಶ್ವಾಸ ಮೂಡಿರುತ್ತದಾದ್ದರಿಂದ ತನ್ನ ಅವಶ್ಯಕತೆಯಿರುವುದಿಲ್ಲ ಎಂಬುದು ಆಕೆಯ ಅನಿಸಿಕೆಯಾಗಿತ್ತು.

ಒಂದು ಚಿಕ್ಕ ಹೊಟ್ಟೆನೋವು ಅವಳನ್ನು ಬಲಿ ತೆಗೆದುಕೊಳ್ಳಬಹುದೆಂದು ಅನ್ನಿಸಲೇ ಇಲ್ಲ. ನಾಲ್ಕಾರು ದಿನಗಳ ಕಾಲ 'ಮಣಿಪಾಲ ಆಸ್ಪತ್ರೆ'ಯಲ್ಲಿ ಮಲಗಿದವಳು ಮತ್ತೇ ಏಳಲೇ ಇಲ್ಲ. ಇನ್ನೊಂದೆರಡು ದಿನಗಳಲ್ಲಿ ಹುಷಾರಾಗಿ, ಕುಣಿಯುತ್ತಾ ಬಂದು, 'ಲತಾ, ಕೆಲಸ ಶುರು ಮಾಡೋಣ' ಎಂದು ಹೇಳುತ್ತಾಳೆಂದು ಕಾದಿದ್ದೇ ಬಂತು. ಆದರೆ ಆ ಗಳಿಗೆ ಬರಲೇ ಇಲ್ಲ. ಎಲ್ಲವನ್ನೂ ಎಲ್ಲರನ್ನೂ, ಎಲ್ಲ ಕೆಲಸ, ಕನಸುಗಳನ್ನು ಇಲ್ಲೇ ಬಿಟ್ಟು, ಕೈ ಬೀಸಿಕೊಂಡು ಮಧ್ಯಂತರದಲ್ಲಿ ಕಾಣದ ಊರಿಗೆ ನಡೆದೇ ಬಿಟ್ಟಳು, ವೀಣಾ.

* * * (ಸಾಭಾರ : ವಿಜಯ ಕರ್ನಾಟಕ)

ಪುಸ್ತಕ ಪರಿಚಯ

ಪುಸ್ತಕದ ಹೆಸರು : **'ಬಸ್ತರ ಪ್ರವಾಸ'**
ಲೇಖಕರು : ಡಾ. ಕೃಷ್ಣಾನಂದ ಕಾಮತ್
ಪ್ರಕಾಶಕರು : ನವಕರ್ನಾಟಕ ಪ್ರಕಾಶನ
ಪುಟಗಳ ಸಂಖ್ಯೆ : ೧೨೪
ಬೆಲೆ : ೬೫ ರೂ

ಡಾ. ಕೃಷ್ಣಾನಂದ ಕಾಮತ್‌ರ ಬರಹವೆಂದರೆ ಅದು ಕುತೂಹಲಕಾರಿಯೂ, ಜ್ಞಾನಪ್ರದವೂ ಆಗಿರಲೇ ಬೇಕು. ಏಕೆಂದರೆ ಕಾಮತರು ಜೀವನದ ಬಗ್ಗೆ ಸೂಕ್ಷ್ಮ ನಿರೀಕ್ಷಣೆ, ಜಿಜ್ಞಾಸೆ ಮತ್ತು ಚಿಕಿತ್ಸಕ ನಿಲುವುಗಳನ್ನು ಹೊಂದಿದವರಂಥವರಾಗಿದ್ದರು. ಜೊತೆಗೆ ಉತ್ತಮ ಛಾಯಾಗ್ರಾಹಕರೂ ಆಗಿದ್ದರು. ಈಗಾಗಲೇ ಅನೇಕ ಉಪಯುಕ್ತ ಪುಸ್ತಕಗಳನ್ನು ಬರೆದು ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿರುವ ಬಸ್ತರ ಪ್ರವಾಸ ಎರಡನೇ ಮುದ್ರಣವನ್ನು ಕಂಡಿದೆ. ಈ ಪುಸ್ತಕವು ಮಧ್ಯಪ್ರದೇಶದ ಅತಿ ಹಿಂದುಳಿದ ಜಿಲ್ಲೆಯಾದ ಬಸ್ತರದ ಜನಜೀವನವನ್ನು ಪರಿಚಯ ಮಾಡಿಕೊಡುತ್ತದೆ. ಈ ಪುಸ್ತಕವು ಸಮಾಜ ವಿಜ್ಞಾನಿಗಳಿಗೆ ಅತ್ಯಂತ ಉಪಯುಕ್ತವಾದುದಾಗಿದೆ. ಈ ಪುಸ್ತಕದಲ್ಲಿರುವ ಅನೇಕ ರೇಖಾ ಚಿತ್ರಗಳು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ.

* * *

ಪುಸ್ತಕದ ಹೆಸರು : **'ಗಾಂಧೀಜಿ ಮತ್ತ ಗ್ರಾಮೀಣ ಭಾರತ'**
ಲೇಖಕರು : ನೀಲತ್ತಹಳ್ಳಿ ಕಸ್ತೂರಿ
ಪ್ರಕಾಶಕರು : ಗಾಂಧೀಭವನ, ಮೈಸೂರು
ಪುಟಗಳ ಸಂಖ್ಯೆ : ೬೨
ಬೆಲೆ : ೪೦ ರೂ

ದೇಶದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಿಂದ ಗ್ರಾಮಗಳು ನಶಿಸಿಹೋಗುತ್ತಿರುವ ಈ ಕಾಲದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಭಾರತದ ಉಸಿರು ಗ್ರಾಮಗಳೆಂದು ಭಾವಿಸಿದ್ದನ್ನು ಈ ಪುಸ್ತಕದಲ್ಲಿ ಶ್ರೀ ನೀಲತ್ತಹಳ್ಳಿ ಕಸ್ತೂರಿಯವರು ತುಂಬಾ ಸಮರ್ಥವಾಗಿ ಗಾಂಧೀಜಿಯವರ ವಿಚಾರಗಳನ್ನು ಸಂಗ್ರಹಿಸಿದ್ದಾರೆ. ಈ ಪುಸ್ತಕವು ಕಾಲೇಜು ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತವಾಗಿದೆ.

ಪುಸ್ತಕದ ಹೆಸರು: **'ಅಮೋಘ ನಾಯಕ ಗಾಂಧೀ'**
ಲೇಖಕರು : ಫಾಸ್ಕಲ್ ಆಲೆನ್ ನಝ್‌ರತ್
ಅನುವಾದ : ನೀಲತ್ತಹಳ್ಳಿ ಕಸ್ತೂರಿ
ಪ್ರಕಾಶಕರು : ಭಾರತೀಯ ವಿದ್ಯಾಭವನ, ಬೆಂಗಳೂರು.
ಪುಟಗಳ ಸಂಖ್ಯೆ: ೧೨೪
ಬೆಲೆ : ೧೦೦ ರೂ

ಈ ಪುಸ್ತಕದ ಲೇಖಕರು ಭಾರತದ ನಿವೃತ್ತ ರಾಯಭಾರಿ. ಗಾಂಧೀಜಿಯವರ ಬಗ್ಗೆ ಹೊಸ ಹೊಸ ಪುಸ್ತಕಗಳು ಬರುತ್ತಲೇ ಇರುತ್ತವೆ. ಒಂದೊಂದೂ ಪುಸ್ತಕವು ಗಾಂಧೀಜಿಯವರ ವ್ಯಕ್ತಿತ್ವದ ಒಂದೊಂದು ಮುಖವನ್ನು, ಸಾಧನೆಯನ್ನು ಜನತೆಗೆ ತಿಳಿಸುತ್ತವೆ. ಪ್ರಸ್ತುತ ಪುಸ್ತಕವು ಗಾಂಧೀ ಭಾರತದೇಶದ ಅಮೋಘ ನಾಯಕರಾಗಿದ್ದರೆಂಬುದನ್ನು, ಅವರ ಜೀವನದಲ್ಲಿಯ ವಿವಿಧ ಸಾಧನೆಗಳನ್ನು, ಪ್ರಯೋಗಗಳನ್ನು ಆಧರಿಸಿ ರಚಿತವಾಗಿದೆ. ಈ ಪುಸ್ತಕವು ಗಾಂಧೀಜಿಯುವರನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಬಯಸುವವರಿಗೆ ತುಂಬಾ ಸಹಕಾರಿಯಾಗಿದೆ. ಮೂಲ ಇಂಗ್ಲಿಷ್‌ನಲ್ಲಿಯ ಈ ಪುಸ್ತಕವನ್ನು ಕನ್ನಡಕ್ಕೆ ನೀಲತ್ತಹಳ್ಳಿ ಕಸ್ತೂರಿಯವರು ಅನುವಾದ ಮಾಡಿ ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. ಅನುವಾದದಲ್ಲಿ ಸಿದ್ಧಹಸ್ತರಾದ ಕಸ್ತೂರಿಯವರ ಅನುವಾದವು ಸುಲಲಿತವಾಗಿ ಓದುವಂತೆ ಮಾಡುತ್ತದೆ.

ಸಂತಾಪ

ಕರ್ನಾಟಕದ ಸರ್ವೋದಯ ಚಿಂತಕರಲ್ಲಿ ಮತ್ತು ವಿನೋಬಾರ ಆತ್ಮೀಯ ಶಿಷ್ಯರಲ್ಲಿ ಒಬ್ಬರಾಗಿದ್ದ ಅರೈಯರ್ ಶ್ರೀನಿವಾಸ ಅಯ್ಯಂಗಾರ್‌ರವರು ದಿನಾಂಕ: ೨೦-೧೨-೨೦೦೭ ರ ಗುರುವಾರ ವೈಕುಂಠ ಏಕಾದಶಿಯಂದು ಬೆಂಗಳೂರಿನಲ್ಲಿ ತಮ್ಮ ಸುಮಾರು ೯೦ ವರ್ಷಗಳ ಇಳಿವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಸದಾ ಸಮಾಜದ ಹಿತ ಚಿಂತನೆಯನ್ನು ಮಾಡುತ್ತಿದ್ದ ಮತ್ತು ಶ್ರೀ ವೈಷ್ಣವ ಸಿದ್ಧಾಂತದಲ್ಲಿ ಸರ್ವೋದಯ ದರ್ಶನದ ವಿಚಾರವನ್ನೂ, ಸರ್ವೋದಯ ವಿಚಾರದಲ್ಲಿ ಶ್ರೀವೈಷ್ಣವ ಸಿದ್ಧಾಂತವನ್ನೂ ಸಮನ್ವಯಗೊಳಿಸಿದ ಹಾಗೂ ಕರ್ನಾಟಕ ರಾಜ್ಯದಲ್ಲಿ ಭೂದಾನ ಯಾತ್ರೆಯನ್ನು ಕೈಗೊಂಡಿದ್ದ ಮತ್ತು 'ಆಳ್ವರ್ ಶರಣರ ತಿರುಪತಿ ತಿಮ್ಮಪ್ಪ' ಎಂಬ ಗ್ರಂಥದ ಕರ್ತೃವಾಗಿದ್ದ ಅರೈಯರ್ ಅವರ ನಿಧನಕ್ಕೆ ಜನಪದ ವಿಚಾರವು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ ಮತ್ತು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಈ ಕೆಳಗೆ ಕಾಣಿಸಿದ ಮಹನೀಯರಿಂದ ಟ್ರಸ್ಟಿನ ಕಾರ್ಯಕ್ರಮಗಳಿಗಾಗಿ ಧನಸಹಾಯ ದೊರೆಯಿತು.

ಶ್ರೀ ಆರ್.ಅನಂತರಾವ್ ಮತ್ತು ಎ.ಆನಂದ್ ಬೆಂಗಳೂರು, ಶ್ರೀ ನಾಗೇಶ್‌ಕಾಮತ್ ಬೆಂಗಳೂರು, ಶ್ರೀ ಡಿ.ಎಸ್.ನಾಡಿಗ್ ಬೆಂಗಳೂರು, ಶ್ರಿ ಎಸ್.ಕೆ.ಅಶ್ವಥ್‌ನಾರಾಯಣ್ ಮತ್ತು ಮಿತ್ರರು ಬೆಂಗಳೂರು, ಶ್ರೀಮತಿ ಕೆ.ಎಂ.ಸಾವಿತ್ರಮ್ಮ ಹಾಸನ, ಶ್ರೀ ಎಸ್.ಜೆ.ಬ್ರಹ್ಮದೇವಯ್ಯ ಮೈಸೂರು, ಶ್ರೀ ಎಸ್.ಎನ್.ಶ್ರೀಧರಮೂರ್ತಿ ದಾವಣಗೆರೆ, ಶ್ರೀ ಎನ್.ಕೋಟೇಶ್ವರರಾವ್ ಬೆಂಗಳೂರು, ಶ್ರೀಮತಿ ಪಿ.ಜೊಸೆಫಿನಾ ಮೇರಿ ಬೆಂಗಳೂರು, ಶ್ರೀಮತಿ ಎ.ಎಂ.ಸುಜಾತ ಬೆಂಗಳೂರು, ಶ್ರೀ ಎಸ್.ರತ್ನಾಕರನಾಯಕ್ ಬೆಂಗಳೂರು, ಶ್ರೀ ನಂಜಾರೆಡ್ಡಿ ಚಿಂತಾಮಣಿ, ಶ್ರೀಮತಿ ಉಮಾಸತ್ಯಮೂರ್ತಿ ಮೈಸೂರು, ಶ್ರೀ ಸಾಂಬಶಿವಯ್ಯ ಕುದುರೇಮುಖ, ಶ್ರೀ ಸಿ.ಡಿ.ಬಾಲಚಂದ್ರ ಮೈಸೂರು, ಶ್ರೀ ಎಸ್.ಅಂಥೋನಿ ಬಾಲರಾಜ್ ಬೆಂಗಳೂರು (ಸೀಗೇಹಳ್ಳಿ), ಶ್ರೀ ಬಿ.ಎಸ್.ರಾಮಯ್ಯ ಬೆಂಗಳೂರು.

ಇವರೆಲ್ಲರಿಗೆ ಟ್ರಸ್ಟ್ ತುಂಬಾ ಆಭಾರಿಯಾಗಿದೆ.

ಟ್ರಸ್ಟಿನ ಖಜಾಂಚಿಯವರಾದ ಶ್ರೀ ಡಿ.ಪ್ರಭಾಕರ್ ಅವರು ಭೇಟಿಕೊಟ್ಟು ಹಣಕಾಸಿನ ವ್ಯವಹಾರವನ್ನು ಪರಿಶೀಲಿಸಿ ಮುಂದಿನ ಕೆಲಸಗಳಿಗೆ ಹಣದ ವ್ಯವಸ್ಥೆ ಮಾಡಿದರು.

ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಈಚಲಕರಂಜಿ ಎಂಬ ನಗರದಲ್ಲಿರುವ ಎಫ್.ಐ.ಇ. ಫೌಂಡೇಷನ್‌ನವರು ಟ್ರಸ್ಟಿನ ಅಧ್ಯಕ್ಷರಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಟ್ರಸ್ಟಿನ ಅಭಿಮಾನಿಗಳಲ್ಲೊಬ್ಬರಾಗಿದ್ದ ಪಾಂಡವಪುರ ತಾಲ್ಲೂಕಿನ ಶಾಸಕರಾಗಿದ್ದ ದಿ॥ ಡಿ.ಹಲಗೇಗೌಡರ ಹೆಸರಿನಲ್ಲಿ ಸ್ಮಾರಕ ಸಂಸ್ಥೆಯನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಟ್ರಸ್ಟಿನ ಅಧ್ಯಕ್ಷರು ಕೈಗೂಡಿಸಿದರು. ಆ ಸಂಸ್ಥೆಗೆ 'ಡಿ.ಹಲಗೇಗೌಡ ಸ್ಮಾರಕ ಸಾಮಾಜಿಕ ಸೇವಾ ಸಂಸ್ಥೆ' ಎಂದು ನಾಮಕರಣ ಮಾಡಲಾಗಿದೆ. ಹಲವಾರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ಈ ಸೇವಾ ಸಂಸ್ಥೆಯ ಆಶ್ರಯದಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಟ್ರಸ್ಟಿನ ಅಧ್ಯಕ್ಷರು ೨೦೦೭ ಡಿಸೆಂಬರ್ ೬, ೭ ಮತ್ತು ೮ ನೇ ತಾರೀಖುಗಳಲ್ಲಿ ಚನ್ನೈನಲ್ಲಿ ನಡೆದ ಸರ್ವ ಸೇವಾ ಸಂಘದ ಅರ್ಧವಾರ್ಷಿಕ ಅಧಿವೇಶನದಲ್ಲಿ ಭಾಗವಹಿಸಿದರು. ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರದಲ್ಲಿ ಖಾದಿ ಉತ್ಪಾದನೆ, ವ್ಯವಸಾಯ ಇತ್ಯಾದಿ ಕಾರ್ಯಕ್ರಮಗಳು ಪುನರಾರಂಭಗೊಂಡಿವೆ.


ಅಮೆರಿಕಾದ ಅಯೋವಾ ವಿಶ್ವವಿದ್ಯಾನಿಲಯದ ಮೂವರು ವಿದ್ಯಾರ್ಥಿಗಳು ಟ್ರಸ್ಟಿನಲ್ಲಿ ಕೆಲವು ದಿನಗಳಿದ್ದು ಹಲವಾರು ಸಾಮಾಜಿಕ ವಿಷಯಗಳನ್ನು ತಿಳಿದುಕೊಂಡರು.

ದೇಶದ ವಿವಿಧ ಆಕಾಶವಾಣಿ ಕ್ಷೇತ್ರಗಳಲ್ಲಿ ನಿರ್ದೇಶಕರಾಗಿ ಕೆಲಸಮಾಡಿರುವ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿರುವ ಸಾಹಿತಿ ಮತ್ತು ಕೃಷ್ಣಾನಂದ ಕಾಮತರ ಪತ್ನಿಯವರಾದ ಶ್ರೀಮತಿ ಜ್ಯೋತ್ಸ್ನಾ ಕಾಮತ್ ಮತ್ತು ಇವರ ಪುತ್ರ ವಿಕಾಸ್ ಹಾಗೂ ಸೊಸೆ ಕಿಮ್‌ರವರು ಟ್ರಸ್ಟಿಗೆ ಭೇಟಿ ಕೊಟ್ಟರು.

* * *

ಜನಪದ ನಿಲಯದ ಅಂತರಂಗದಲ್ಲಿ . . . ೫೦

- ಸುರೇಂದ್ರ ಕೌಲಗಿ



ಯಾವ ರೀತಿ ಅನೇಕ ತೊರೆಗಳು ಸೇರಿ ನದಿಯಾಗುತ್ತದೋ ಅದೇ ರೀತಿ ಅನೇಕ ಸಹೃದಯರ ಸಹಾಯದಿಂದ ಒಂದು ಸಂಘಟನೆ ಬೆಳೆಯುತ್ತದೆ ಮತ್ತು ಉಳಿಯುತ್ತದೆ. ಈ ಮಾತು ಜನಪದ ಸೇವಾ ಟ್ರಸ್ಟಿಗೆ ಚೆನ್ನಾಗಿ ಅನ್ವಯಿಸುತ್ತದೆ. ಟ್ರಸ್ಟನ್ನು ಪ್ರಾರಂಭಿಸಿದ ವ್ಯಕ್ತಿಗಳು ಸಮಾಜದಲ್ಲಿ ಯಾವುದೇ ಅಧಿಕಾರದ ಸ್ಥಾನದಲ್ಲಿ ಇದ್ದವರಾಗಿರಲಿಲ್ಲ. ಯಾವುದೇ ರಾಜಕೀಯ ಪ್ರಭಾವವನ್ನು ಹೊಂದಿದವರಾಗಿರಲಿಲ್ಲ. ಅಲ್ಲದೆ ಯಾವುದೇ ಒಂದು ಧರ್ಮದ ಮಠಾಧೀಶರೂ ಆಗಿರಲಿಲ್ಲ. ಟ್ರಸ್ಟಿನ ಸ್ಥಾಪಕರೆಲ್ಲರು ಸಾಮಾನ್ಯರು, ಶುದ್ಧರು ಮತ್ತು ಆದರ್ಶದ ಬೆನ್ನುಹತ್ತಿದವರು. ಹಣಕ್ಕಿಂತ ಹೆಚ್ಚಾಗಿ ಆತ್ಮಸ್ಥೈರ್ಯವುಳ್ಳವರಾಗಿದ್ದರು. ಆದ್ದರಿಂದ ಟ್ರಸ್ಟ್ ೪೫ ವರ್ಷಗಳ ಕಾಲ ಅವ್ಯಾಹತವಾಗಿ ಸಾರ್ವಜನಿಕ ಸೇವೆ ಮಾಡಿಕೊಂಡು ಬರಲು ಅದಕ್ಕೆ ಶಕ್ತಿ ಬಂದಿದ್ದರೆ ಅದಕ್ಕೆ ಕಾರಣ ನೂರಾರು ಜನರ ನೂರಾರು ರೀತಿಯ ಸಹಾಯಗಳು ಮತ್ತು ಸಹಕಾರಗಳು.

ನಾಲ್ಕೂವರೆ ದಶಕಗಳಿಂದ ಟ್ರಸ್ಟ್ ನಡೆದು ಬಂದ ದಾರಿಯನ್ನು ಸ್ಮರಿಸಿಕೊಳ್ಳುತ್ತಾ ಹೋದಾಗ ಸ್ಮೃತಿಪಟಲದ ಮೇಲೆ ಬರುವ ವ್ಯಕ್ತಿಗಳ ಸಂಖ್ಯೆ ಅಗಣಿತ. ಅವರಲ್ಲಿ ಕೆಲವರು ವಿಶೇಷ ವ್ಯಕ್ತಿಗಳಾಗಿದ್ದರೆ, ಇನ್ನೂ ಕೆಲವರು ಅತಿ ಸಾಧಾರಣ ವ್ಯಕ್ತಿಗಳು. ಕೆಲವರು ಶ್ರೀಮಂತರಾಗಿದ್ದರೆ ಇನ್ನು ಹಲವರು ಬಡವರು. ಕೆಲವರು ವಿದ್ವಾಂಸರು, ಸಾಹಿತಿಗಳು ಆಗಿದ್ದರೆ ಇನ್ನು ಅನೇಕರು ಕೇವಲ ಅಕ್ಷರಸ್ಥರು. ಹೀಗೆ ವೈವಿಧ್ಯಮಯ ಹಿನ್ನೆಲೆಯುಳ್ಳ ಅನೇಕ ವ್ಯಕ್ತಿಗಳು ಜನಪದ ಸೇವಾ ಟ್ರಸ್ಟನ್ನು ಕಟ್ಟಿ ಬೆಳೆಸುವುದರಲ್ಲಿ ತಮ್ಮದೇ ಆದ ವಿಶಿಷ್ಟ ಪಾತ್ರವನ್ನು ವಹಿಸಿದ್ದಾರೆ.

ಜನಪದ ಸೇವಾ ಟ್ರಸ್ಟಿನಲ್ಲಿ ಅಭಿಮಾನಿಗಳ ಬಳಗ ಕಾಲಕ್ರಮೇಣ ಹೆಚ್ಚುತ್ತಾ ಹೋದದ್ದು ಒಂದು ವಿಶೇಷ ಸಂಗತಿಯೇ ಸರಿ. ಏಕೆಂದರೆ ಯಾವುದೇ ಸಂಸ್ಥೆಯ ಇರುವಿಕೆಯಲ್ಲಿ ೪೫ ವರ್ಷಗಳು ಕಡಿಮೆಯೇನಲ್ಲ. ಕೆಲವು ಸಂಸ್ಥೆಗಳ ಆಯುಷ್ಯ ಕೇವಲ ಐದಾರು ವರ್ಷಗಳಿರುವಾಗ ಮತ್ತೆ ಕೆಲವು ಸಂಸ್ಥೆಗಳು ಹುಟ್ಟುತ್ತಲೇ ಸಾಯುವಾಗ ಜನಪದ ಸೇವಾ ಟ್ರಸ್ಟ್ ನಾಲ್ಕೂವರೆ ದಶಕಗಳ ಕಾಲ ಬಾಳಿ ಬೆಳೆದದ್ದು ಈ ಅಭಿಮಾನಿಗಳ ಕಾರಣದಿಂದಲೆ. ಈಗಾಗಲೆ ನಮೂದಿಸಿರುವಂತೆ ಟ್ರಸ್ಟ್ ತನ್ನ ಪ್ರಾರಂಭದ ದಿನಗಳಿಂದಲೂ ಸಮಾಜವನ್ನು ಆಶ್ರಯಿಸಿಕೊಂಡೆ ಜೀವಿಸುತ್ತಾ ಬಂದಿದೆ. ಈ ಸಂಸ್ಥೆಯ ಪ್ರಾರಂಭದ ದಿನಗಳಲ್ಲಿ ಯಾವುದೇ ಕೂಡಿಟ್ಟ ನಿಧಿಯೂ ಇರಲಿಲ್ಲ ಅಥವಾ ಆಸ್ತಿಯೂ ಇರಲಿಲ್ಲ. ಕೆಲವೊಂದು ಸಲ ಈ ಸಂಸ್ಥೆಯ ಹೆಸರು ಗೊಂದಲವನ್ನು ಸಹ ಮಾಡಿದ್ದುಂಟು. ಸಾಮಾನ್ಯವಾಗಿ ಟ್ರಸ್ಟ್ ಎಂದಕ್ಷಣ ಈ ಸಂಸ್ಥೆಯು ಟ್ರಸ್ಟ್ ಕಾನೂನಿನ ಅಡಿಯಲ್ಲಿ ನೊಂದಾಯಿತವಾಗಿರಬೇಕೆಂಬ ಅಭಿಪ್ರಾಯ ಬರುತ್ತದೆ. ಜೊತೆಗೆ ಇದು ಯಾವುದೇ ಒಂದು ಕುಟುಂಬದ ಸಂಸ್ಥೆ ಎಂಬ ಭಾವನೆಯು ಮೂಡುತ್ತದೆ, ವಾಸ್ತವವಾಗಿ ಈ ಎರಡು ಭಾವನೆಗಳು ತಪ್ಪೆಂದು ಹೇಳಬೇಕು. ಏಕೆಂದರೆ ಜನಪದ ಸೇವಾ ಟ್ರಸ್ಟ್

ನೋಂದಣಿಯಾಗಿರುವುದು ೧೯೦೪ ರ ಮೈಸೂರು ರಾಜ್ಯ ನೋಂದಣಿ ಸಂಘಗಳ ಕಾನೂನಿನನ್ವಯ. ಈಗ ಆ ಕಾನೂನು ಪರಿಷ್ಕೃತಗೊಂಡಿದೆ. ಟ್ರಸ್ಟ್ ಎಂಬ ಹೆಸರು ಬರುವುದಕ್ಕೆ ಕಾರಣ ಆಗಿನ ಕಾಲದಲ್ಲಿ ಕರ್ನಾಟಕದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ವಿದ್ವಾಂಸರು, ಅಖಿಲ ಭಾರತ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರು ಆಗಿದ್ದ ಆರ್.ಆರ್.ದಿವಾಕರ್‌ರವರು ಸ್ಥಾಪಿಸಿದ್ದ ಲೋಕ ಶಿಕ್ಷಣ ಟ್ರಸ್ಟ್ ಬಹು ಪ್ರಸಿದ್ಧಿಯನ್ನು ಪಡೆದಿತ್ತು. ಈ ಟ್ರಸ್ಟ್ ಪತ್ರಿಕೆಗಳನ್ನಲ್ಲದೆ ಅನೇಕ ಆಧ್ಯಾತ್ಮಿಕ ಗ್ರಂಥಗಳನ್ನೂ ಪ್ರಕಟಿಸಿತ್ತು. ನಮ್ಮ ಜನಪದ ಸೇವಾ ಟ್ರಸ್ಟ್ ಪ್ರಾರಂಭವಾಗುವ ಕಾಲಕ್ಕೆ ಟ್ರಸ್ಟ್ ಎಂಬ ಹೆಸರು ಒಂದು ಆಕರ್ಷಣೀಯ ಮತ್ತು ಅರ್ಥಪೂರ್ಣವಾದ ಶಬ್ದವೂ ಆಗಿತ್ತು. ಆದ್ದರಿಂದ ಜನಪದ ಸೇವಾ ಟ್ರಸ್ಟ್ ಎಂಬ ಹೆಸರನ್ನು ಇಟ್ಟುಕೊಳ್ಳಲಾಯಿತು. ಅಂದರೆ ಟ್ರಸ್ಟ್ ಎಂಬ ಶಬ್ದವು ಸಂಸ್ಥೆಯ ಒಂದು ಹೆಸರಿನ ಭಾಗವೇ ಹೊರತು ಟ್ರಸ್ಟ್ ಆ್ಯಕ್ಟ್ ಪ್ರಕಾರ ಸ್ಥಾಪಿತಗೊಳ್ಳುವ ಸಂಸ್ಥೆಗಳ ಹೆಸರಿನಲ್ಲಿರುವ ಟ್ರಸ್ಟ್ ಎಂಬ ಅರ್ಥದಲ್ಲಲ್ಲ. ಇನ್ನೂ ಎರಡನೆಯ ಗೊಂದಲ ಕೌಟುಂಬಿಕ ಸಂಸ್ಥೆಯೆಂಬ ವಿಷಯಕ್ಕೆ ಸಂಬಂಧಿಸಿದ್ದು. ಜನಪದ ಸೇವಾ ಟ್ರಸ್ಟ್ ಪ್ರಾರಂಭಕ್ಕೆ ಯಾರು-ಯಾರು ಕಾರಣರಾದರೋ ಅವರೇ ಆ ಸಂಸ್ಥೆಯ ಸಕ್ರಿಯ ಕಾರ್ಯಕರ್ತರಾಗಿ ನಡೆಸಿಕೊಂಡು ಬಂದಿದ್ದಾರೆ ಮತ್ತು ಈಗಲೂ ಅವರೆ ನಡೆಸಿಕೊಂಡು ಹೋಗುತ್ತಿದ್ದಾರೆ. ಅಂದರೆ ಜನಪದ ಸೇವಾ ಟ್ರಸ್ಟ್ ಯಾವುದೇ ಒಂದು ಕುಟುಂಬದ ಟ್ರಸ್ಟ್ ಆಗಿರದೆ ಒಂದು ಕುಟುಂಬವನ್ನು ತನ್ನ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಯಾಗಿದೆ.

ಮೇಲುಕೋಟೆಯಲ್ಲಿ ಟ್ರಸ್ಟಿನ ಉದಯವಾದಾಗ ಯಾವ ರೀತಿ ಜನಿಸಿದ ಮಗುವಿಗೆ ಒಂದು ನೆಮ್ಮದಿಯ ತಾಣ ಬೇಕಾಗುತ್ತದೊ ಹಾಗೆಯೇ ಜನಪದ ಸೇವಾ ಟ್ರಸ್ಟಿಗೂ ಒಂದು ನೆಮ್ಮದಿಯ ತಾಣದ ಅಗತ್ಯವಿತ್ತು. ಈ ಅಗತ್ಯತೆಯನ್ನು ಪೂರೈಸಿಕೊಟ್ಟವರು ಕುಟ್ಟಿ. ಇವರು ಸರ್ವೋದಯ ಕಾರ್ಯಕರ್ತರು ಮತ್ತು ಬ್ರಹ್ಮಚಾರಿ. ಎರಡೂ ಕೈಗಳು ತಮ್ಮ ಶಕ್ತಿಯನ್ನು ಕಳೆದುಕೊಂಡಿದ್ದವು. ಆ ಕೈಗಳಿಂದ ಯಾವುದೇ ಕೆಲಸವನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಊಟ ಮಾಡುವುದೂ ಸಹ ಕಷ್ಟಕರವಾಗಿತ್ತು. ಆದರೂ ಸಹ ಅವರು ತಮ್ಮ ಅನೇಕ ಕೆಲಸಗಳನ್ನು ಸ್ವತಃ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ದೇಹದಲ್ಲಿಯ ಒಂದು ಕೊರತೆ ಇನ್ನೊಂದು ರೂಪದಲ್ಲಿ ಶಕ್ತಿಯಾಗಿ ಬರುತ್ತದೆಂಬುದಕ್ಕೆ ಕುಟ್ಟಿ ಸಾಕ್ಷಿಯಾಗಿದ್ದರು. ಅವರ ಕೈಗಳಲ್ಲಿ ಇಲ್ಲದ ಶಕ್ತಿ ಕಾಲುಗಳಿಗೆ ಬಂದಿತ್ತು. ಆದ್ದರಿಂದ ವಿನೋಬಾರವರ ಆದೇಶದಂತೆ ದೇಹದಲ್ಲಿ ರಕ್ತ ಹರಿದಾಡುವಂತೆ ಅವರು ಭಾರತದೇಶದ ಅನೇಕ ರಾಜ್ಯಗಳಲ್ಲಿ ತಮ್ಮ ಜೀವಿತದ ಕೊನೆಯ ದಿನದವರೆಗೂ ಸರ್ವೋದಯದ ವಿಚಾರಕ್ಕಾಗಿ ಪಾದಯಾತ್ರೆ ಮಾಡಿಕೊಂಡೇ ಇದ್ದರು. ಅವರ ಸ್ವಂತ ಗ್ರಾಮವಾದ ಮೇಲುಕೋಟೆಯಲ್ಲಿ ಸರ್ವೋದಯ ವಿಚಾರದ ಸಂಸ್ಥೆ ಪ್ರಾರಂಭವಾದದ್ದು ಅವರಿಗೆ ಸಂತೋಷವನ್ನು ತಂದು ಕೊಟ್ಟಿತ್ತು. ತಮಗೆ ಮಾಡಲು ಸಾಧ್ಯವಾಗದೆ ಇರುವ ಕೆಲಸವನ್ನು ಬೇರೆಯವರು ಮಾಡುವುದಾದರೆ ಅದನ್ನು ಪ್ರೋತ್ಸಾಹಿಸಬೇಕೆಂಬ ವಿಶಾಲ ಮನೋಭಾವದವರು ಕುಟ್ಟಿ. ಆದ್ದರಿಂದ ಜನಪದ ಸೇವಾ ಟ್ರಸ್ಟ್‌ಗೆ ಒಂದು ಆಶ್ರಯವನ್ನು ಹುಡುಕುತ್ತಿದ್ದಾಗ ಕುಟ್ಟಿಯವರು ತಮ್ಮ ಹಿರಿಯವರು ಕಟ್ಟಿಸಿದ ಮನೆಯಲ್ಲಿ ಆಶ್ರಯವನ್ನು ಕೊಡಲು ಮುಂದೆ ಬಂದರು. ಅವರು ಮನೆಯನ್ನು ಬಾಡಿಗೆಗೆ ಕೊಟ್ಟರಾದರೂ ಆ ಬಾಡಿಗೆ ಕೇವಲ ನಿಮಿತ್ತ ಮಾತ್ರವಾಗಿತ್ತು. ಆ ಮನೆಯೇ ಇಂದಿನ ಜನಪದ ನಿಲಯ. ಹೀಗೆ ಟ್ರಸ್ಟಿಗೆ ಸಹಾಯ ಮಾಡಿದ ಸಹೃದಯರಲ್ಲಿ ಕುಟ್ಟಿಯವರು ಪ್ರಮುಖರಾಗಿ ಕಣ್ಮುಂದೆ ನಿಲ್ಲುತ್ತಾರೆ. (ಮುಂದುವರಿಯುವುದು)

ಬಾಂಧವ್ಯ

(ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ)

೧) ಶ್ರೀ ಎಸ್.ಎಚ್.ಜೋಷಿ, ಬೆಂಗಳೂರು
೨) ಶ್ರೀ ನರಸಿಂಹ, ಮೇಲುಕೋಟೆ
೩) ಶ್ರೀ ತುಳಸೀರಾಂ, ಮುಳಬಾಗಿಲು
೪) ಶ್ರೀ ಸಿ.ಜಿ.ರವಿಶಂಕರ್, ಮೈಸೂರು

ಈ ಬಂಧುಗಳು ತಮ್ಮ ಚಂದಾವನ್ನು ನವೀಕರಿಸಿದ್ದಕ್ಕಾಗಿ ಕೃತಜ್ಞತೆಗಳು.

ಜನಪದ ಧ್ವನಿ

ಪ್ರಚಲಿತ ವಿಷಯಗಳ ಬಗ್ಗೆ ಓದುಗರ ವಿಚಾರ ಸ್ಪಂದನದ ಪ್ರಕಟಣೆಗಾಗಿ ಈ ಅಂಕಣ ಮೀಸಲು. ಆದ್ದರಿಂದ ಜಾಗೃತ ಓದುಗರು ತಮ್ಮ ಅನಿಸಿಕೆಗಳನ್ನು ಸಂಕ್ಷಿಪ್ತವಾಗಿ ಬರೆದ ಲೇಖನಕ್ಕೆ ಸ್ವಾಗತ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ. *-ಸಂಪಾದಕರು*

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(-ಸಂಪಾದಕರು)*

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.
DTP Sanketh, Melkote. Printed at INDIVARA, Nagamangala Phone : 08236 – 298754 e-mail : janapada@yahoo.com